# ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 33 ಆಗಸ್ಟ್ 22, 1982 ಬೆಲೆ 60 ಪೈಸೆ

ಡಿಲ್ಲಿ

## "ಪಿ.ಡಿ." ಮುದ್ರಣಾಲಯದ ಮೇಲೆ ನಕ್ಸಲೀಯರ ಹಲ್ಲೆ

ಮುಜಫರ್ ಅಹಮದ್ ಸ್ಮಾರಕ ಟ್ರಸ್ಟ್‌ನ ಒಡೆತನದಲ್ಲಿರುವ 'ಪ್ರೊಗ್ರೆಸಿವ್ ಪ್ರಿಂಟರ್ಸ್' ಮುದ್ರಣಾಲಯದಲ್ಲಿ ಸಿ. ಪಿ. ಐ. (ಎಂ)ನ 'ಪೀಪಲ್ಸ್ ಡೆಮೋಕ್ರಸಿ' ಹಾಗೂ 'ಲೋಕ್ ಲಹರ್' ಮುದ್ರಿತವಾಗುತ್ತವೆ. ಈ ಮುದ್ರಣಾಲಯದ ಎದುರು ಆಗಸ್ಟ್ 6 ರಂದು ನಕ್ಸಲೀಯರ ಗುಂಪೊಂದು ನೆರೆದಿತ್ತು. ಸ್ವಲ್ಪ ಹೊತ್ತು ಸಭೆ ನಡೆಸಿದ ಈ ಗುಂಪು ನಂತರ ಮುದ್ರಣಾಲಯದ ಕಡೆಗೆ ನುಗ್ಗಿ ಕಲ್ಲು ತೂರಲಾರಂಭಿಸಿತು. ಆ ಕ್ಷೇತ್ರದ ಸಿ.ಐ.ಟಿ.ಯು. ಕಾರ್ಯಕರ್ತರು ಅವರನ್ನು ಒಳನುಗ್ಗದಂತೆ ತಡೆಯುವಾಗ ನಡೆದ ಘರ್ಷಣೆಯಲ್ಲಿ ಹಲವು ಸಿ ಐ ಟಿ.ಯು ಕಾರ್ಯಕರ್ತರಿಗೆ ಹಾಗೂ ಸಂದರ್ಶಕರಿಗೆ ಗಾಯಗಳಾಗಿ ಆಸ್ಪತ್ರೆಗೆ ಸೇರಿಸಬೇಕಾಗಿ ಬಂತು. ಈ ಹಿಂದೆಯೂ ಈ ನಕ್ಸಲೀಯ ಗುಂಪು ಮುದ್ರಣಾಲಯದ ಕಾರ್ಮಿಕರನ್ನು ಹೆದರಿಸಲು ಪ್ರಯತ್ನಗಳನ್ನು ನಡೆಸಿತ್ತು. ಮೇ ತಿಂಗಳಲ್ಲಿ ಇಬ್ಬರು ಕಾರ್ಮಿಕರನ್ನು ಥಳಿಸಿತ್ತು. ಈ ಬಗ್ಗೆ ಪೋಲೀಸರಿಗೆ ದೂರು ಕೊಡಲಾಗಿತ್ತು. ಆಗಸ್ಟ್ 6 ರಂದು ಪೋಲಿಸರಿಗೆ ಈ ಬಗ್ಗೆ ತಿಳಿದಿದ್ದರೂ ಕೇವಲ ವೀಕ್ಷಕರಂತೆ ನಡೆದುಕೊಂಡರು ಮಾತ್ರವಲ್ಲ ದೊಂಬಿಕಾರರನ್ನು ಶಿಕ್ಷಿಸುವ ಬದಲು ಮುದ್ರಣಾಲಯದ ಮ್ಯಾನೇಜರನ್ನು ಬಂಧಿಸಿದ್ದಾರೆ. ಸಿ. ಐ. ಟಿ. ಯು.ನ ಡಿಲ್ಲೀ ರಾಜ್ಯ ಸಮಿತಿಯ ಮೇಲೆ ಪೋಲಿಸರು ಮೊಕದ್ದಮೆ ಹೂಡುವ ಯೋಜನೆಯಲ್ಲಿದ್ದಾರಂತೆ !

ತಮ್ಮ ದಿವಾಳಿಕೋರ ನೀತಿಯಿಂದಾಗಿ ಹತಾಶೆಗೊಂಡ ನಕ್ಸಲೀಯರು ಪ್ರಜಾಪ್ರಭುತ್ವ ಚಳುವಳಿಯನ್ನು ಹಾಗೂ ಎಡ ಶಕ್ತಿಗಳನ್ನು ಅಸ್ತವ್ಯಸ್ತಗೊಳಿಸಲು ಹೇಗೆ ಗೂಂಡಾ ತಂತ್ರ ಉಪಯೋಗಿಸುತ್ತಾರೆಂಬುದಕ್ಕೆ ಇದೊಂದು ನಿದರ್ಶನ.

ಸಿ.ಪಿ.ಐ. (ಎಂ)ನ ಡಿಲ್ಲೀ ರಾಜ್ಯ ಸಮಿತಿಯು ಹೇಳಿಕೆ ನೀಡಿ ಪಕ್ಷದ ಕಾನೂನು ಬದ್ಧ ಚಟುವಟಿಕೆಗಳನ್ನು ಅಸ್ತವ್ಯಸ್ತಗೊಳಿಸುವ ಗೂಂಡಾ ದಾಳಿಗಳನ್ನು ಸಹಿಸುವುದಿಲ್ಲ ಎಂದು ನಕ್ಸಲೀಯರಿಗೆ ಎಚ್ಚರಿಕೆ ನೀಡಿದೆ. ಅಲ್ಲದೆ ಒಂದು ರಾಜಕೀಯ ಪಕ್ಷದ ಸಾಮಾನ್ಯ ಚಟುವಟಿಕೆಗಳಿಗೆ ಈ ರೀತಿ ತಡೆಯೊಡ್ಡುವುದನ್ನು ಖಂಡಿಸಬೇಕೆಂದು ಎಲ್ಲಾ ರಾಜಕೀಯ ಪಕ್ಷಗಳು ಹಾಗೂ ಪ್ರಜಾಪ್ರಭುತ್ವವಾದಿಗಳನ್ನು ವಿನಂತಿಸಿಕೊಂಡಿದೆ.

## ನಮ್ಮ ಕರ್ತವ್ಯ

ಕಳೆದ ಕೆಲವು ತಿಂಗಳಿಂದ ರಾಜ್ಯಾದ್ಯಂತ ದೊಡ್ಡ ಗೊಂದಲವೆಬ್ಬಿಸಿದ ಗೋಕಾಕರ ವರದಿಯ ಮೂಲ ವ್ಯಕ್ತಿಯಾದ ಡಾ|| ಗೋಕಾಕರು ಇಷ್ಟು ಕಾಲ ಮೌನ ತಾಳಿದವರು ಈಗ ಬಾಯಿ ಬಿಟ್ಟಿರುವುದು ಆಶ್ಚರ್ಯ. ಇದೇ ತಾ|| 15 ರಂದು ಮೈಸೂರಿನಲ್ಲಿ ಈ ಮಹಾಶಯರು ಮಾತಾಡುತ್ತಾ ಕೆಲವರು ತಮ್ಮ ವರದಿಯನ್ನು ಟೀಕಿಸಿದುದರ ಬಗ್ಗೆ ವಿಷಾದ ವ್ಯಕ್ತಪಡಿಸಿದ್ದಾರೆ. ಈ ವರದಿಯು ರಾಷ್ಟ್ರ ವಿರೋಧಿಯಲ್ಲವೆಂದೂ, ಅಲ್ಪ ಸಂಖ್ಯಾತರ ವಿರೋಧಿಯಲ್ಲವೆಂದೂ ಪ್ರಸ್ತಾಪಿಸಿದ್ದಾರೆ.

ತಮ್ಮ ವರದಿಯನ್ನು ಪುಷ್ಟೀಕರಿಸಲು ಭಾಷಾವಾರು ಪ್ರಾಂತ ರಚನೆಯ ಪ್ರಶ್ನೆಯನ್ನೇ ಮಂಡಿಸಿದ್ದಾರೆ. ಭಾಷಾವಾರು ಪ್ರಾಂತ ರಚನೆಯ ಚಳುವಳಿಯಲ್ಲಿ ಕಮ್ಯೂನಿಸ್ಟ್ ಪಾರ್ಟಿಯೂ ಅಗ್ರಸ್ಥಾನವನ್ನು ವಹಿಸಿತ್ತು. ಭಾಷಾವಾರು ಪ್ರಾಂತಗಳ ರಚನೆಯಾಗಬೇಕೆಂದು ಹೋರಾಡುವಾಗ ಒಂದೇ ಭಾಷೆ ಮಾತಾಡುವ ಜನ ಬಹುಸಂಖ್ಯಾತರಾಗಿರುವ ಪ್ರದೇಶಗಳನ್ನು ಒಂದೇ ಆಡಳಿತೆಯಲ್ಲಿ ತರಬೇಕೆಂಬುದೇ ಮೂಲ ಉದ್ದೇಶವಾಗಿತ್ತೆಂಬುದನ್ನು ನಾವು ಹೇಳಲಿಚ್ಛಿಸುತ್ತೇವೆ. ಇದರಿಂದ ಭಾಷೆ, ಸಂಸ್ಕೃತಿಗಳ ಅಭಿವೃದ್ಧಿಯೂ ಜನತೆಯ ಆರ್ಥಿಕ ಮತ್ತು ಸಂಪದಭಿವೃದ್ಧಿಯಾಗುತ್ತದೆಂಬ ಭರವಸೆಯೂ ಇತ್ತು.

### ಸಂಪಾದಕೀಯ

ಮುಖ್ಯವಾಗಿ ಆಡಳಿತೆಯು ಆ ಪ್ರದೇಶದ ಭಾಷೆಯಲ್ಲೇ ನಡೆಯುತ್ತದೆಂಬ ವಿಶ್ವಾಸವಿತ್ತು. ಆದರೆ ರಾಜ್ಯ ರಚನೆಯಾಗಿ 25 ವರ್ಷಗಳಾದರೂ ಇವು ಯಾವುವೂ ಈಡೇರಲಿಲ್ಲ. ರಾಜ್ಯದ ಜನತೆಯ ಜೀವನಮಟ್ಟ ದಿನೇ ದಿನೇ ಇಳಿಮುಖವಾಗುತ್ತಿದೆ. ಶೇ. 70ಕ್ಕಿಂತ ಅಧಿಕ ಜನ ನಮ್ಮ ರಾಜ್ಯದಲ್ಲಿ ಅನಕ್ಷರಸ್ಥರಿದ್ದಾರೆ. ಪ್ರಾಥಮಿಕ ಶಿಕ್ಷಣ ಪಡೆಯುವವರ ಸಂಖ್ಯೆಯೂ ವರ್ಷದಿಂದ ವರ್ಷಕ್ಕೆ ಇಳಿಮುಖವಾಗುತ್ತಿದೆ. ಒಂದೆರಡು ವರ್ಷ ಅಭ್ಯಾಸ ಮಾಡಿ ಬಿಡುತ್ತಿರುವವರೇ ನಮ್ಮಲ್ಲಿ ಹೆಚ್ಚು. ಇದಕ್ಕೆ ನಮ್ಮ ಜನರಲ್ಲಿರುವ ಬಡತನವೇ ಮೂಲ ಕಾರಣ. ಈ ಸಮಸ್ಯೆಯನ್ನು ಬಗೆಹರಿಸುವ ಕೆಲಸಕ್ಕೆ ಗಮನಕೊಡದೆ ಕನ್ನಡಕ್ಕೆ ಅಗ್ರಸ್ಥಾನ ಇರಬೇಕೆಂಬ ಒಂದೇ ಹೆಬ್ಬಯಕೆಯನ್ನಿಟ್ಟುಕೊಂಡು ಯಾವ ತಂತ್ರವನ್ನು ಪ್ರಯೋಗಕ್ಕೆ ತಂದರೂ ಅದರಿಂದ ನಾವು ನಿರೀಕ್ಷಿಸುವ ಪ್ರತಿಫಲ ದೊರೆಯಲಾರದು. ಕಡ್ಡಾಯ ಕ್ರಮ ಒತ್ತಾಯದ ಮಾಘ ಸ್ನಾನ ಮಾಡಿದಂತೆ. ಇದರಿಂದ ಪುಣ್ಯವೂ ಇಲ್ಲ ಪುರುಷಾರ್ಥವೂ ಇಲ್ಲ.

ಭಾಷಾವಾರು ಪ್ರಾಂತ ರಚನೆಯಾದಾಗ ವಿವಿಧ ಪ್ರಾಂತಗಳಲ್ಲಿ ವಾಸಿಸುತ್ತಿದ್ದ ಮತ್ತು ಬೇರೆ ಬೇರೆ ಕಾರಣಗಳಿಂದ ವಲಸೆ ಬರುವ ಇತರ ಭಾಷೆಗಳನ್ನಾಡುವ ಅಲ್ಪಸಂಖ್ಯಾತರಿಗೆ ಅನ್ಯಾಯವಾಗಬಾರದೆಂಬ ಉದ್ದೇಶದಿಂದ ಕೇಂದ್ರ ಸರಕಾರವೇ ಅಲ್ಪ ಸಂಖ್ಯಾತರ ರಕ್ಷಣೆಗೆ ಕೆಲವು ಸಂವಿಧಾನಾತ್ಮಕ ಹಕ್ಕುಗಳನ್ನು ಕೊಟ್ಟಿದೆ. ಅದರಲ್ಲಿ ತಮ್ಮ ಮಾತೃ ಭಾಷೆಯಲ್ಲಿ ಶಿಕ್ಷಣ ಪಡೆಯುವ ಹಕ್ಕು ಒಂದಾಗಿದೆ ಯಾವುದೇ ನೆರೆ ರಾಜ್ಯದಲ್ಲಿ ಕನ್ನಡಿಗರಿಗೆ ಈ ಸೌಲಭ್ಯ

(8ನೇ ಪುಟ ನೋಡಿ)

ದೆಹಲಿಗೆ ಪಿ.ಎಲ್.ಓ. ನಾಯಕನ ಭೇಟಿ

## 'ನಾವು ಖಂಡಿತ ಶರಣಾಗತರಾಗೆವು'

"ಇಸ್ರೇಲಿ ಝಿಯೋನಿಸ್ಟರ ಆಕ್ರಮಣದ ವಿರುದ್ಧ ನಮ್ಮ ಹೋರಾಟ ಮುಂದುವರೆಯುವುದು. ನಾವು ಖಂಡಿತ ಶರಣಾಗತರಾಗೆವು"—ಇದು ಆಗಸ್ಟ್ 9 ರಂದು ದೆಹಲಿಗೆ ಭೇಟಿ ನೀಡಿದ ಪಿ.ಎಲ್.ಓ ನ್ಯಾಷನಲ್ ಕೌನ್ಸಿಲ್ ಸದಸ್ಯ ಸಾದಿಕ್ ಅಲ್ ಷಫೀ ಅವರ ನಿಖರ ನುಡಿ. ಅವರು ದೆಹಲಿಯ ಪತ್ರಕರ್ತರನ್ನುದ್ದೇಶಿಸಿ ಮಾತನಾಡುತ್ತಿದ್ದರು.

"ಲೆಬನಾನ್ ಮೇಲೆ ಕಳೆದ 66 ದಿನಗಳಿಂದ ಇಸ್ರೇಲ್ ಆಕ್ರಮಣ ನಡೆಸಿದ್ದರೂ, ಇಸ್ರೇಲಿನ ಝಿಯೋನಿಸ್ಟರು ಸಾಧಿಸಿದ್ದು ಶೂನ್ಯ. ಪಿ. ಎಲ್. ಓ. ವನ್ನು ಸರ್ವನಾಶಮಾಡುವುದು, ಕ್ಯಾಂಪ್ ಡೇವಿಡ್ ಒಪ್ಪಂದವನ್ನು ಅನುಷ್ಠಾನಕ್ಕೆ ತರುವದು, ಲೆಬನಾನ್‌ನ ದೇಶಪ್ರೇಮಿ ಶಕ್ತಿಗಳನ್ನು ಸೆದೆಬಡಿದು ಕೈಗೊಂಬೆ ಸರಕಾರವನ್ನು ಅಸ್ತಿತ್ವಕ್ಕೆ ತರುವುದು, ಕ್ಯಾಂಪ್ ಡೇವಿಡ್ ಒಪ್ಪಂದವನ್ನು ವಿರೋಧಿಸುತ್ತಿರುವ ಸಿರಿಯಾಕ್ಕೆ ಪಾಠ ಕಲಿಸುವುದು—ಇವೇ ಇಸ್ರೇಲ್‌ನ ಝಿಯೋನಿಸ್ಟರ ಆಕ್ರಮಣ ಉದ್ದೇಶ" ಎಂದು ಪಿ. ಎಲ್. ಓ. ನಾಯಕ ಷಫೀ ಸ್ಪಷ್ಟಪಡಿಸಿದರು.

ಆದರೆ ಪಿ. ಎಲ್. ಓ ಸೈನಿಕರು ಲೆಬನಾನ್‌ನ ದೇಶಪ್ರೇಮಿ ಶಕ್ತಿಗಳೊಂದಿಗೆ, ಸಿರಿಯಾದ ಸೈನಿಕ ಪಡೆಗಳೊಂದಿಗೆ ಭುಜಕ್ಕೆ ಭುಜ ಕೊಟ್ಟು ಈ ಆಕ್ರಮಣವನ್ನು ಎದುರಿಸುತ್ತಿದ್ದಾರೆ. ಈ ಪ್ರದೇಶದಲ್ಲಿ ಕಾಲೂರಲು ಇಸ್ರೇಲ್—ಅಮೇರಿಕ ನಡೆಸಿದ ಕುತಂತ್ರಗಳನ್ನು ವಿಫಲಗೊಳಿಸಿದ್ದಾರೆ ಎಂದು ಪಿ. ಎಲ್. ಓ ನಾಯಕ ನುಡಿದರು.

ತಮ್ಮ ಕ್ಷುದ್ರ ಆಶೋತ್ತರಗಳನ್ನು ಈಡೇರಿಸಿಕೊಳ್ಳಲು ಇಸ್ರೇಲ್‌ನ ಝಿಯೋನಿಸ್ಟರು ಸಫಲರಾಗಿಲ್ಲವೆಂದು ನುಡಿದ ಷಫೀ, ಆಕ್ರಮಣದ ವಿರುದ್ಧ ಇಸ್ರೇಲಿನ ಜನತೆ ಸತ್ವಶಾಲಿ ಕೂಗನ್ನೆಬ್ಬಿಸಿರುವುದು ಸ್ವಾಗತಾರ್ಹ ಎಂದರು. ಇಸ್ರೇಲ್ ರಾಜಧಾನಿ ಟೆಲ್ ಅವೀವ್‌ನಲ್ಲಿ ನಡೆದ ಆಕ್ರಮಣ ವಿರೋಧಿ ಬೃಹತ್ ಮತಪ್ರದರ್ಶನವನ್ನು ಉದಹರಿಸಿದರು.

ಬೇಗನ್ ಮತ್ತು ಷರಾನ್‌ರ ರಕ್ತದಾಹಕ್ಕೆ ಹೇಸಿದ ಕೆಲವು ಇಸ್ರೇಲಿನ ಸೇನಾ ಅಧಿಕಾರಿಗಳು, ಮುಗ್ಧ–ನಿರಪರಾಧಿ ನಾಗರಿಕರನ್ನು ಯುದ್ಧದ ಹೆಸರಿನಲ್ಲಿ ಕೊಲ್ಲಲು ನಿರಾಕರಿಸುತ್ತಿದ್ದಾರೆ—ಇದು ಸ್ವಾಗತಾರ್ಹ ಬೆಳವಣಿಗೆ ಎಂದು ಷಫೀ ನುಡಿದರು.

ಈ ಆಕ್ರಮಣದ ವಿರುದ್ಧ ಪ್ಯಾಲೆಸ್ತೀನಿಯನ್ ಮತ್ತು ಲೆಬನಾನ್ ಜನತೆ ಅಪಾರ ಸಾವು ನೋವುಗಳನ್ನೆದುರಿಸಿಯೂ ಹೋರಾಡುತ್ತಿದ್ದಾರೆ. ಲೆಬನಾನ್‌ನ ಕ್ರಿಶ್ಚಿಯನ್ ಮತ್ತು ಮುಸ್ಲಿಂ ಜನತೆ ಜೊತೆಗೂಡಿ ಹೋರಾಡುತ್ತಿದ್ದಾರೆ ಎಂದು ಷಫೀ ತಿಳಿಸಿದರು.

"ಅಮೇರಿಕೆಯಿಂದ ಮಾನ್ಯತೆಯನ್ನು ಪಿ.ಎಲ್.ಓ. ಬೇಡುವುದೇ" ಎಂಬ

(8ನೇ ಪುಟ ನೋಡಿ)

## ಸೆ. ೧: ಶಾಂತಿ ಮತ್ತು ಸೌಹಾರ್ದತಾ ದಿನಾಚರಣೆಯನ್ನು ಯಶಸ್ವಿಗೊಳಿಸಿ

## ಕರ್ನಾಟಕ ರಾಜ್ಯದಲ್ಲಿ

# ಸ್ವಾತಂತ್ರ್ಯ ದಿನದ ಎರಡು ಘೋಷಣೆಗಳು

—ಎನ್ಕೆ

ಕೋಮುವಾದ, ಜಾತೀಯವಾದ ಹಾಗೂ ಪ್ರಾಂತೀಯವಾದದ ಶಕ್ತಿಗಳ ವಿರುದ್ಧ ಹೋರಾಡಲು ರಾಷ್ಟ್ರಪತಿ ಜೇಲ್‌ಸಿಂಗರು, ಮೂವತ್ತೈದನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ದೇಶವನ್ನುದ್ದೇಶಿಸಿ ಭಾಷಣ ಮಾಡುತ್ತ ಹೇಳಿದರು.

ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಕರ್ನಾಟಕ ರಾಜ್ಯದ ಜನರನ್ನುದ್ದೇಶಿಸುತ್ತ ಮುಖ್ಯ ಮಂತ್ರಿ ಗುಂಡೂರಾಯರು ಜಾತಿ ನಾಶ ಅಸಾಧ್ಯವೆಂಬ ಮುತ್ತಿನ ಮಣಿಗಳನ್ನು ಸುರಿಸಿದರು.

ಕೇಂದ್ರದಲ್ಲಿ ವಿದೇಶಿ ಮಂತ್ರಿಯಾಗಿದ್ದಾಗ ಪ್ರತ್ಯೇಕ ಖಲೀಸ್ತಾನಕ್ಕಾಗಿ ಚಳುವಳಿಗಾರರಿಗೆ ಪ್ರೋತ್ಸಾಹ ನೀಡುತ್ತ, ಕೆಲವು ತಿಂಗಳ ಹಿಂದೆ ಲೋಕಸಭೆಯಲ್ಲಿ ನಾಝಿ ಹಿಟ್ಲರನನ್ನು ಸ್ಮರಿಸಿಕೊಂಡು, ಹಾಗೆಯೇ ಇಂದಿರಾ ಗಾಂಧಿಯ ಸೇವೆಗಾಗಿ ಕಸಗುಡಿಸಲೂ ತಯಾರಿದ್ದೇನೆಂದು ತನ್ನ ನಮ್ರತೆಯನ್ನು ಪ್ರದರ್ಶಿಸಿ, ಅಮ್ಮಾವ್ರ ಆಶೀರ್ವಾದಿಂದ ದೇಶದ ಅತ್ಯುಚ್ಚ ಪದವಿ ರಾಷ್ಟ್ರಪತಿಯ ಸ್ಥಾನದಿಂದ ವಿವೇಚನಾತ್ಮಕ ನುಡಿಯನ್ನು ನುಡಿದಿದ್ದಾರೆ ಜೇಲ್‌ಸಿಂಗ್. ಕಳೆದ 35 ವರ್ಷಗಳ ಆಳ್ವಿಕೆಯಲ್ಲಿ, ತನ್ನ ಪಕ್ಷದ ಅಧಿಕಾರವನ್ನುಳಿಸಿಕೊಳ್ಳುವ ಒಂದೇ ಒಂದು ಅಭಿಲಾಷೆಯಿಂದ, ಜಾತಿ-ಉಪಜಾತಿಗಳನ್ನೆಲ್ಲ ಎತ್ತಿಕಟ್ಟಿ, ಆರ್.ಎಸ್.ಎಸ್. ಜೊತೆಯಲ್ಲಿ ಜಾತಿಯ ದಂಗೆ, ಭಾವೋದ್ರೇಕಗಳಿಗೆ ಆಹಾರವನ್ನೊದರಿಸುತ್ತಾ ಬಂದ ಕಾಂಗ್ರೆಸ್ಸಿನ ಬುನಾದಿ ಕೋಮುವಾದ, ಜಾತೀವಾದ, ಪ್ರತ್ಯೇಕತಾವಾದಗಳೆಂಬುದನ್ನ ಮನಗಂಡು ಕೂಡ ಜೇಲ್‌ಸಿಂಗರು ಹೇಳಿದ ಈ ಮಾತುಗಳು ಬರೀ ಪ್ರಚಾರದ ಸಲುವಾಗಿದೆಯೆಂಬ ವಿಷಯ ಸಾರ್ವಜನಿಕರಿಗೆ ಗೊತ್ತು.

ರಾಷ್ಟ್ರಾಧ್ಯಕ್ಷ ಜೇಲ್‌ಸಿಂಗರ ಹಾಗೆ ಜನತೆಗೆ ಮೋಸಬೇಡವೆಂದು ತಿಳಿದೇ ಮುಖ್ಯ ಮಂತ್ರಿ ಗುಂಡೂರಾಯರು ತನ್ನ ಬ್ರಹ್ಮ ಸ್ವರೂಪವನ್ನು ತೋರ್ಪಡಿಸಿದ್ದಾರೆ. ಜಾತಿನಾಶವಾಗಲು ಸಾಧ್ಯವಿಲ್ಲೆಂದು ಗುಂಡೂರಾಯರ ವಾದ. ಇಂದಿರಾ ನಾಟಕ ಕಂಪೆನಿಯ ಮ್ಯಾನೇಜರರಾಗಿರುವ ತನಕ ಇದೇ ವಾದವನ್ನು ಅವರು ಸಾಧಿಸುವುದರಲ್ಲಿ ಸಂಶಯವಿಲ್ಲ. ಅವರಂತೆಯೇ ಈ ಹಿಂದೆ ಇಂದಿರಾ ಗಾಡಿಯಲ್ಲಿ ಪ್ರಯಾಣಿಸುತ್ತಿದ್ದವರೆಲ್ಲ ಇದೇ ಹಾಡನ್ನೇ ಹಾಡುತ್ತಿದ್ದರು. ಇಂಧಿರಾ ಬಸ್ಸಿನಿಂದ ಕೆಳಗಿಳಿದ ನಂತರ ಹಾಡಿನ ರಾಗ ಬದಲಾಗುತ್ತಿದ್ದುದನ್ನು ಕಂಡವರು ಬಹಳ ಜನ. ಪ್ರಾಥಮಿಕ ಶಾಲೆಯಿಂದ ಹಿಡಿದು ಉಚ್ಚ ಶಿಕ್ಷಣದವರೆಗೂ ಮಕ್ಕಳು ಜಾತಿ, ಉಪಜಾತಿಯನ್ನು ನಮೂದಿಸಬೇಕು. ನೌಕರಿಗಳು ಕೂಡ ಅದರ ಮೇಲೆಯೇ ಅವಲಂಬಿಸಿವೆ. ಸರಕಾರದ ಧನ ಸಹಾಯ, ನೌಕರಿ, ಮಂತ್ರಿ ಸ್ಥಾನಗಳೆಲ್ಲ ಕೋಮಿನ ಆಧಾರದ ಮೇಲೆಯೇ ನಡೆದಿವೆ. ಆದ್ದರಿಂದ ಈಗಿರುವ ಸಮಾಜ, ಆರ್ಥಿಕ ಸಂಬಂಧ, ಉತ್ಪಾದನಾ ಸಂಬಂಧಗಳೆಲ್ಲ ಬದಲಾವಣೆಯಾಗುವ ತನಕ ಜಾತಿವಾದ ಅಸ್ತಿತ್ವದಲ್ಲಿರುತ್ತವೆ. ಕಾಂಗ್ರೆ ಪಾರ್ಟಿ ಅಧಿಕಾರದಲ್ಲಿರುವ ತನಕ ಜಾತೀವಾದ ಭದ್ರವೆಂದು ಗುಂಡೂರಾಯರ ಅಭಿಮತ ಇರಬೇಕು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮುಖಂಡತ್ವದ ಎಡರಂಗ ಸರಕಾರ ಇರುವಲ್ಲಿ, ಹೋರಾಟಗಳ ಮೂಲಕ, ರೈತ, ಕಾರ್ಮಿಕ, ಯುವಜನತೆ, ವಿದ್ಯಾರ್ಥಿ ಹಾಗೂ ಸಾರ್ವಜನಿಕರಲ್ಲಿ ನವಚೈತನ್ಯ, ಹೊಸ ಜಾಗೃತಿಯನ್ನುಂಟುಮಾಡಿದ ಪ. ಬಂಗಾಲ, ತ್ರಿಪುರಾಗಳಲ್ಲಿ ಮಾತ್ರ ಕಾಂಗ್ರೆ ಮತ್ತಿನ್ನಿತರ ಬಂಡವಾಳಶಾಹಿ ವಿರೋಧ ಪಕ್ಷಗಳು ಜಾತೀಯ ವಿಷಬೀಜ ಬಿತ್ತಲು ಶತಪ್ರಯತ್ನ ನಡೆಸುತ್ತಿದ್ದರೂ, ಫಲದಾಯಕ ಭೂಮಿ ಅವರಿಗೆ ಸಿಗುತ್ತಿಲ್ಲ ಎಂಬ ವಿಷಯ ನಮ್ಮ ಜನತೆ ತಿಳಿದುಕೊಳ್ಳುವುದಗತ್ಯ. ದುಡಿಯುವ ಜನತೆಯ ಆರ್ಥಿಕ ಹೋರಾಟವನ್ನು ರಾಜಕೀಯ ಚಳುವಳಿಯನ್ನಾಗಿ ಪರಿವರ್ತಿಸಿ, ಜನತೆ ರಾಜಕೀಯವಾಗಿ (ಬಂಡವಾಳಶಾಹಿ ರಾಜಕೀಯವಲ್ಲ, ಮಾರ್ಕ್ಸ್‌ವಾದ-ಲೆನಿನ್‌ವಾದದ ಆಧಾರದ ಸಮತಾವಾದಿ ರಾಜಕೀಯ) ಸಮಸ್ಯೆಗಳನ್ನು ತಿಳಿದುಕೊಳ್ಳುವಂತೆ ಮಾಡಿದರೆ ಮಾತ್ರ ಜೇಲ್‌ಸಿಂಗ್, ಗುಂಡೂರಾವ್ ಭಾಷಣಗಳ ನಿಜವಾದ ಅರ್ಥ ತಿಳಿದುಕೊಳ್ಳಲು ಸಾಧ್ಯ. ಇಂಥ ವಿಚಾರಗಳನ್ನು ಹೊಂದಿರುವ ರಾಜಕೀಯ ಪಕ್ಷಗಳಿಂದ ಜನತೆಯನ್ನು ದೂರವಿಡಲು ಸಾಧ್ಯ. ಸಿ. ಪಿ. ಐ. (ಎಂ), ಇತರ ಎಡ ಪಕ್ಷಗಳು, ಪ್ರಗತಿಶೀಲರು ಮುಖ್ಯವಾಗಿ ಸಿ.ಐ.ಟಿ.ಯು, ಕಿಸಾನ ಸಭಾ, ವಿದ್ಯಾರ್ಥಿ-ಯುವಜನ, ಮಹಿಳಾ ಸಂಘಟನೆಗಳು ಈ ಗುರುತರ ಜವಾಬ್ದಾರಿಯನ್ನು ಹೊರಬೇಕಾಗಿದೆ. ಅವಾಗ ಮಾತ್ರ ಗುಂಡೂರಾಯರ ವಾದಕ್ಕೆ ಸರಿಯಾದ ಉತ್ತರ ಬರುತ್ತದೆ. ಆ ದಿಸೆಯಲ್ಲಿ ಕೆಲಸ ಮಾಡಲು, ಜನರ ಹೋರಾಟ ನಡೆಸಲು, ಸಮಾಜ ಬದಲಾವಣೆ ಮಾಡಲು ಮುಂದಾಗೋಣ.

## ನೇರಸ್ಪರ್ಧೆ ನಡೆದರೆ ಕಾಂಗ್ರೆ ಸೋಲು

ಮುಂಬರುವ ಚುನಾವಣೆಯಲ್ಲಿ ನೇರ ಸ್ಪರ್ಧೆ ನಡೆದರೆ ಕಾಂಗ್ರೆ ಪರಾಭವ ಖಚಿತವೆಂದು ಜನತಾ ಪಕ್ಷದ ಮುಖಂಡರಾದ ಎಂ.ಎಸ್.ಗುರುಪಾದಸ್ವಾಮಿಯವರು ಹುಬ್ಬಳ್ಳಿಯಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ವಾಸ್ತವ ವಿಚಾರವನ್ನು ವ್ಯಕ್ತಪಡಿಸಿದ್ದಾರೆ.

ಲೋಕಸಭೆ ಮತ್ತು ರಾಜ್ಯಸಭೆಗಳಿಗೆ ನಡೆದ ಚುನಾವಣೆಗಳ ಫಲಿತಾಂಶಗಳನ್ನು ಅಧ್ಯಯನ ಮಾಡಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಗುರುಪಾದಸ್ವಾಮಿಯವರ ಮಾತನ್ನೇ ಈ ಹಿಂದೆಯೂ ಒತ್ತಿ ಹೇಳಿತ್ತು. ಇಂದಿರಾ ಗಾಂಧಿ ಅಲ್ಪ ಮತಗಳಿಂದಲೇ ಕೇಂದ್ರ ಮತ್ತು ಹಲವಾರು ರಾಜ್ಯಗಳಲ್ಲಿ ಅಧಿಕಾರ ಪಡೆಯುತ್ತಿದ್ದಾರೆ. ಚುನಾವಣೆಯಲ್ಲಿ ನೇರ ಸ್ಪರ್ಧೆಯಲ್ಲಿದ್ದರಿಂದ, ವಿರೋಧಿ ಪಕ್ಷಗಳ ಮತ ಹರಿದು ಹಂಚಿ ಹೋಗುತ್ತಿರುವುದರಿಂದಲೇ ಮತ್ತೆ ಮತ್ತೆ ಇಂದಿರಾ ಕಾಂಗ್ರೆ ಅಧಿಕಾರಕ್ಕೆ ಬರುವಂತಾಗಿದೆಂದೂ, ಸಾಧ್ಯವಾದ ಮಟ್ಟಿಗಾದರೂ, ಸರ್ವಾಧಿಕಾರಿ ಶಕ್ತಿಯನ್ನು ಸೋಲಿಸುವ ದೃಷ್ಟಿಯಿಂದ, ಪ್ರಜಾಪ್ರಭುತ್ವ ಮತ್ತು ನಾಗರೀಕ ಹಕ್ಕುಗಳು ಬದುಕುಳಿಯುವುದಕ್ಕಾಗಿ ಎಲ್ಲ ವಿರೋಧ ಪಕ್ಷಗಳು–ರಾಜಕೀಯ ಭಿನ್ನಾಭಿಪ್ರಾಯಗಳಿದ್ದರೂ ಕೂಡ—ಚುನಾವಣಾ ಹೊಂದಾಣಿಕೆ ಮಾಡಿಕೊಂಡು ನೇರ ಸ್ಪರ್ಧೆಗಿಳಿಯಬೇಕೆಂಬುದೇ ಸಿ. ಪಿ. ಐ. (ಎಂ)ನ ಅಭಿಪ್ರಾಯ. ದುರಾದೃಷ್ಟದಿಂದ ಸಿ. ಪಿ. ಐ. (ಎಂ) ಒಂದು ಪಾರ್ಟಿ ಬಿಟ್ಟರೆ ಉಳಿದ ಎಲ್ಲ ವಿರೋಧ ಪಕ್ಷಗಳು ಈ ನಿಲುವೆಯ ಮಹತ್ವವನ್ನು ತಿಳಿದುಕೊಂಡಿದ್ದರೂ ಕೂಡ, ತಂತಮ್ಮ ರಾಜ್ಯ ಘಟಕಗಳ ಒತ್ತಡಕ್ಕೆ ಬಲಿಯಾಗಿ, ಹೊಂದಾಣಿಕೆ ಮಾಡಿಕೊಳ್ಳಲು ನಿರಾಕರಿಸಿ, ಅಪ್ರತ್ಯಕ್ಷವಾಗಿ ಕಾಂಗ್ರೆ ಗೆಲ್ಲುವಂತೆ ಮಾಡಿವೆ. ಪ. ಬಂಗಾಲ, ತ್ರಿಪುರಾಗಳಲ್ಲಿ, ಈ ರೀತಿ ಹೊಂದಾಣಿಕೆಮಾಡಿಕೊಳ್ಳದೆ ಕಾಂಗ್ರೆ ಜೊತೆಯಲ್ಲಿ ತಾವು ಸೋಲನ್ನನುಭವಿಸಿವೆ. ಎಡ ಪಾರ್ಟಿಗಳು ಹಾಗೂ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಕನಿಷ್ಟ ಕಾರ್ಯಕ್ರಮಗಳ ನಿಲುವೆಯಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸುತ್ತಾರೆ. ಇದು ಕೆಲವು ರಾಜ್ಯಗಳಲ್ಲಿ ಸಾಧ್ಯ. ಕರ್ನಾಟದಂಥ ರಾಜ್ಯದಲ್ಲಿ ಕನಿಷ್ಟ ಕಾರ್ಯಕ್ರಮಗಳ ಆಧಾರದಲ್ಲಿ ಸ್ಪರ್ಧಿಸಲಿಕ್ಕೆ ಸಾಧ್ಯವಾಗದಿದ್ದರೂ ಕೂಡ, ಸರ್ವಾಧಿಕಾರಿ ಶಕ್ತಿಯನ್ನೂ, ಕಾಂಗ್ರೆಯ ದುರಾಡಳಿತೆಯನ್ನೂ ಸೋಲಿಸುವ ದೃಷ್ಟಿಯಿಂದ, ಕಾಂಗ್ರೆ ವಿರುದ್ಧ ನೇರ ಸ್ಪರ್ಧೆ ನಡೆಸಬೇಕೆಂಬ ಗುರುಪಾದಸ್ವಾಯವರ ಅಪೇಕ್ಷೆಯನ್ನು ರಾಜ್ಯದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಸಂಪೂರ್ಣ ಬೆಂಬಲಿಸುತ್ತದೆ. ಈ ಆಸೆ ಫಲಕಾರಿಯಾಗಬೇಕಾದರೆ ವಿರೋಧ ಪಕ್ಷಗಳ ಮುಖಂಡರಲ್ಲಿ ವಿಶಾಲ ಮನೋಭಾವ, ಹೊಂದಾಣಿಕೆ ಮಾಡಿಕೊಳ್ಳುವ ತಳಮಳ, ತ್ಯಾಗ ಬುದ್ಧಿ ಅತ್ಯಗತ್ಯ.

ಈ ದಿಸೆಯಲ್ಲಿ ಗುರುಪಾದಸ್ವಾಮಿ ಮುಂದಾಗಲಿ. ಅದಕ್ಕೆ ನಮ್ಮ ಹಾರ್ದಿಕ ಸ್ವಾಗತ.

ಇಂಥ ಚುನಾವಣಾ ಹೊಂದಾಣಿಕೆಯ ವಿಚಾರವನ್ನು ಬರೀ ಮುಖಂಡರಿಗಷ್ಟೆ ಬಿಟ್ಟುಕೊಟ್ಟರೆ ಸಾಲದು. ಸರ್ವಾಧಿಕಾರಿ ಶಕ್ತಿಯನ್ನು ಸೋಲೀಸಬೇಕಾದರೆ, ಆಯಾ ಪಕ್ಷದ ಕೆಳಮಟ್ಟದ ಕಾರ್ಯಕರ್ತರಲ್ಲೂ ಸಾರ್ವಜನಿಕರಲ್ಲೂ ಅಂಥ ತಿಳುವಳಿಕೆ, ಬರುವಂತೆ ಚಳುವಳಿ ಹೂಡುವುದು, ಆ ಚಳುವಳಿಯ ಭಾರ ಮುಂಬಡತ್ವಕ್ಕೆ ತಟ್ಟುವಂತೆ ಮಾಡುವುದು ಅತ್ಯಗತ್ಯ.

ಈ ದಿಸೆಯಲ್ಲೂ ಜನಜಾಗೃತಿಯನ್ನುಂಟು ಮಾಡಲು ಕಾರ್ಯಪ್ರವೃತ್ತರಾಗುವುದು ಅತ್ಯಗತ್ಯ.

## ನೆರೆ ಹಾವಳಿಗೆ ಪರಿಹಾರ ಉಂಟೇ ?

ನೆರೆ ಹಾವಳಿಯಿಂದ ಈ ವರ್ಷ ರಾಜ್ಯದ, ದಕ್ಷಿಣ ಕನ್ನಡ, ಶಿವಮೊಗ್ಗ, ಕಾರವಾರ ಜಿಲ್ಲೆ, ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳ ಕೆಲವು ಪ್ರದೇಶಕ್ಕುಂಟಾದ ಅಪಾರ ಜನ, ಆಸ್ತಿ, ಬೆಳೆ ಹಾನಿಗಳನ್ನು ನೋಡಿ, ಗುಂಡೂರಾಯರೂ, ಕಾಗೋಡು ತಿಮ್ಮಪ್ಪನವರೂ ದೊಡ್ಡ ಘೋಷಣೆ ಮಾಡಿದ್ದಾರೆ. ಅದೇನೆಂದರೆ ನೆರೆ ಹಾವಳಿಯನ್ನು ತಡೆಗಟ್ಟುವುದಕ್ಕಾಗಿ ಪರಿಹಾರ ಸೂಚಿಸಲು ಒಂದು ಉಚ್ಚಮಟ್ಟದ ಕಮಿಟಿಯನ್ನು ನೇಮಿಸಲಾಗುವುದೆಂದು ಸಾರಿದ್ದಾರೆ.

ಎರಡು ವರ್ಷಗಳ ಹಿಂದೆ ನಮ್ಮ ರಾಜ್ಯದ ಅರ್ಧದಷ್ಟು ಪ್ರದೇಶ ಬರಗಾಲಕ್ಕೆ ತುತ್ತಾದಾಗ, ವಿರೋಧ ಪಕ್ಷಗಳ ಜೊತೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ, ರೈತ ಸಂಘಗಳೆಲ್ಲ ಚಳುವಳಿ ನಡೆಸಿದಾಗ, ಬಿಜಾಪುರದಲ್ಲಿ ಮುಖ್ಯ ಮಂತ್ರಿ ಗುಂಡೂರಾಯರು ಬರಗಾಲ ನಿವಾರಣೆಗೆ ಉಪಾಯ ಸೂಚಿಸಲು ಉಚ್ಚ ಮಟ್ಟದ ಸಮಿತಿ ನೇಮಿಸಬೇಕೆಂದು ಸಿ. ಪಿ. ಐ. (ಎಂ) ಮಾಡಿದ ಸೂಚನೆಯನ್ನು ಒಪ್ಪಿಕೊಂಡು ಮೂರು ತಿಂಗಳೊಳಗೆ ಅಂಥ ಸಮಿತಿ ನೇಮಿಸುವ ಬಹಿರಂಗ ಆಶ್ವಾಸನೆ ನೀಡಿದ್ದರು.

ಸಮಿತಿಗಳ ನೇಮಕಾತಿಯ ಆಶ್ವಾಸನೆಗಳು ಅಡೆತಡೆಯಿಲ್ಲದೆ ನಡೆದಿವೆ. ಆದರೆ ಅವುಗಳು ಕೃತಿಯಲ್ಲಿಳಿಯದಿರುವುದೇ ಮುಖ್ಯ ಲಕ್ಷಣ.

2-3 ವರ್ಷಕ್ಕೊಮ್ಮೆ ಬರ ಬೀಳುತ್ತದೆ. ಜನರು ಕಷ್ಟಕ್ಕೀಡಾಗುತ್ತಾರೆ. ಅವರ ದುಃಖ ದುಮ್ಮಾನಗಳು ಹಾಗೆಯೇ ಮುಂದುವರಿಯುತ್ತವೆ.

ಕಳೆದ ನಾಲ್ಕೈದು ವರ್ಷಗಳಿಂದ ನೆರೆ ಹಾವಳಿ, ಸಮುದ್ರ ಕೊರೆತ, ಹಳ್ಳಿ, ಭೂಮಿಗಳ ನಾಶಗಳ ಕುರಿತು ಸರಕಾರ ಗಮನ ಹರಿಸಲು ಪ್ರಯತ್ನ ಮಾಡುತ್ತಿದೆ. ಸಮುದ್ರ ಕೊರತೆಯನ್ನು ತಪ್ಪಿಸಲು ಕಾರವಾರ ಜಿಲ್ಲೆಯ (ಹೊನ್ನಾವರ, ಕುಮಟ) ಕೆಲವು ಕಡೆ ಕ್ರಮ ಕೈಗೊಳ್ಳುವುದಾಗುವುದೆಂದು ಹೇಳಿ, ಹಣ ಕೂಡ ಮಂಜೂರು ಮಾಡಲಾಗಿತ್ತು. ಆದರೆ ಈ ವರ್ಷದ ಮಳೆ ಅವುಗಳನ್ನೆಲ್ಲ ಕೊಚ್ಚಿಕೊಂಡು ಹೋಯಿತು. ಹೆಚ್ಚು ಹಾನಿಯಾಯಿತು.

ಯಾವಾಗಾದರೊಮ್ಮೆ ಅತಿ ಮಳೆಯಿಂದಾಗಿ ನೆರೆ ಹಾವಳಿಯನ್ನೆದುರಿಸಬೇಕಾಗಿ ಬಂದಾಗ ಅದಕ್ಕೆ ಪರ್ಯಾಯವಾದ ಕಾಯಂ ಪರಿಹಾರ ಸಿಗಲಿಕ್ಕಿಲ್ಲ. ಆದರೆ ವರ್ಷ ಎರಡು ವರ್ಷಕ್ಕೊಮ್ಮೆ ಎದುರಿಸಬೇಕಾಗಿ ಬರುವ ನಮ್ಮ ರಾಜ್ಯದ ನೆರೆ ಹಾವಳಿಯ ಸಮಸ್ಯೆಗೆ ಪರಿಹಾರ ಕಂಡುಹಿಡಿಯಬಹುದೆಂಬುದಕ್ಕೆ ಜನತಾ ಚೀನಾ ಸರಕಾರದ ಕಾರ್ಯವೇ ಸಾಕ್ಷಿ.

ಪ್ರತಿ ವರ್ಷ ಮಳೆಗಾಲದಲ್ಲಿ ನೆರೆ ನೀರು ಮಣ್ಣು–ಉಸುಕು (ಹೊಯ್ಗೆ)ಗಳನ್ನು ನದಿಗಳ ತಳದಲ್ಲಿ ತಂದು ತುಂಬಿಸುತ್ತದೆ. ಈಗ ನಮ್ಮ ರಾಜ್ಯದ ನದಿಗಳ ತಳದ ಆಳ ಕಳೆದ ಹತ್ತು ವರ್ಷಗಳಿಗಿಂತ ಕಡಿಮೆಯಾಗಿದೆ. ನದಿ ತಳ ಮೇಲೆ ಬಂದಂತೆ ನೆರೆ ನೀರು ಹರಿಯಲು ಅವಕಾಶವಿಲ್ಲದೆ ನೀರಿನ ಜೌಘ ಇರುವ ದಂಡೆಯ ಮಣ್ಣನ್ನು ಹರಿದುಕೊಂಡು ಹೋಗುತ್ತದೆ. ನದಿಯ ಅಗಲ ದೊಡ್ಡದಾಗುತ್ತದೆ.

ಚೀನಾ ದೇಶದಲ್ಲಿ ಕಮ್ಯುನಿಸ್ಟ್ ಪಾರ್ಟಿ ಅಧಿಕಾರಕ್ಕೆ ಬಂದ ನಂತರ, ನೆರೆಯ ನಂತರ, ನದಿ ತಳದಲ್ಲಿರುವ ಹೊಸ ಮಣ್ಣನ್ನು ನದಿ ನೀರಿನೊಡನೆ ಕಲಸಿ ದೋಣಿಗಳಲ್ಲಿ ತುಂಬಿ ಅಥವಾ ಇಂಜಿನಗಳ ಮೂಲಕ ಹೊಲಗಳಿಗೆ ಸಾಗಿಸುವ ವ್ಯವಸ್ಥೆ ಮಾಡುತ್ತಿದ್ದಾರೆ. ಇದರಿಂದಾಗಿ ಎರಡು ಉದ್ದೇಶ ಸಾಧಿಸಿದಂತಾಗುತ್ತದೆ. ನದಿಗಳ ತಳ ಆಳವಾಗುತ್ತದೆ. ಹೊಲಗಳಿಗೆ ಹೊಸ ಮಣ್ಣು ಗೊಬ್ಬರದ ರೀತಿಯಲ್ಲಿ ಸಿಗುವಂತಾಗುತ್ತದೆ.

ಈ ವಿಷಯವನ್ನು ತಿಳಿದೋ ತಿಳಿಯದೆಯೋ ಗೊತ್ತಿಲ್ಲ– ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹರಿಯುತ್ತಿರುವ ನೇತ್ರಾವತಿ ಹೊಳೆಯಲ್ಲಿ ನೆರೆ ಹಾವಳಿಯಿಂದುಂಟಾಗುತ್ತಿರುವ ಹಾನಿಯನ್ನು ಪರಿಹರಿಸಲು ಕಳೆದೆರಡು ವರ್ಷಗಳಿಂದಲೂ ಒಂದು ಸೂಚನೆ ಮಾಡಲಾಗಿತ್ತು. ಬಂಟ್ವಾಳದಿಂದ ಕೆಲವು ದೂರದವರೆಗೆ ನೇತ್ರಾವತಿ ನದಿಯಲ್ಲಿ ತುಂಬಿಕೊಂಡಿರುವ ಮಣ್ಣು ಮತ್ತು ಹೊಯ್ಗೆ (ಉಸುಕು)ಯನ್ನು ತೆಗೆದು ನದಿಯ ಆಳವನ್ನು ಹೆಚ್ಚಿಸಬೇಕೆಂದು. ಹಾಗೆಯೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಕೂಡ ಇಂಥ ಸೂಚನೆಗಳನ್ನು ಹಲವಾರು ಸಲ ಮಾಡಿತ್ತು. ಆದರೆ ನಮ್ಮ ಮಂತ್ರಿಗಳಿಗೆ ಇದರರ್ಥವಾಗುತ್ತಿಲ್ಲ. ಅವರಿಗೆ ಅರ್ಥಮಾಡಿಸುವಂತೆ ನಾವು ಮಾಡಬೇಕಾಗಿದೆ.

### ಪೊಲಿಟ್ ಬ್ಯೂರೋ ಮನವಿ

# ಅಕ್ಟೋಬರ್ ೪ರ ಶಾಂತಿ ಯಾತ್ರೆಯನ್ನು ಯಶಸ್ವಿಗೊಳಿಸಿ

ಅಕ್ಟೋಬರ್ 4 ರಂದು ಶಾಂತಿ ಚಳುವಳಿಯ ಅಂಗವಾಗಿ ದೆಹಲಿಯಲ್ಲಿ ನಡೆಯಲಿರುವ ಬೃಹತ್ ರ್ಯಾಲಿಯನ್ನು ಯಶಸ್ವಿಗೊಳಿಸಬೇಕೆಂದು ಪೊಲಿಟ್ ಬ್ಯೂರೋ ಮನವಿ ಮಾಡಿದೆ.

ಆಗಸ್ಟ್ 6 ಮತ್ತು 7 ರಂದು ದೆಹಲಿಯಲ್ಲಿ ಪಿ. ಬಿ. ಸಭೆ ಸೇರಿ ಇತ್ತೀಚಿನ ರಾಜಕೀಯ ಪರಿಸ್ಥಿತಿಯನ್ನು, ಪಕ್ಷದ ಚಟುವಟಿಕೆಗಳನ್ನು ಪರಿಶೀಲಿಸಿತು. ಪಿ ಬಿ.ಯ ಪತ್ರಿಕಾ ಹೇಳಿಕೆಯ ಮುಖ್ಯಾಂಶಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ :

## ದೆಹಲಿ ರ್ಯಾಲಿ:

ದೆಹಲಿಯಲ್ಲಿ ಅಕ್ಟೋಬರ್ 4 ರಂದು ನಡೆಯುವ ಬೃಹತ್ ರ್ಯಾಲಿಗೆ ಪೂರಕವಾಗಿ ಸಿ.ಪಿ.ಐ. (ಎಂ) ಒಳಗೊಂಡಂತೆ ಆರು ಪಕ್ಷಗಳು ಜಂಟಿಯಾಗಿ ದೇಶದಾದ್ಯಂತ ಶಾಂತಿಗಾಗಿ ಚಳುವಳಿಯನ್ನು ಸಂಘಟಿಸುತ್ತಿರುವುದು ಸಂತೋಷದ ಸಂಗತಿಯಾಗಿದೆ. ಈ ಸಂಯುಕ್ತ ಕಾರ್ಯಾಚರಣೆಯನ್ನು ಸಂಪೂರ್ಣ ಯಶಸ್ವಿಗೊಳಿಸಲು ಶ್ರಮಿಸುವಂತೆ ಪಕ್ಷದ ಎಲ್ಲಾ ಘಟಕಗಳಿಗೂ ಪಿ.ಬಿ. ಆದೇಶ ನೀಡಿದೆ. ಅಣು ಯುದ್ಧದ ಗಂಡಾಂತರದ ವಿರುದ್ಧ ಎಲ್ಲಾ ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳು ಮುಂಬರಬೇಕೆಂದು ಪಿ. ಬಿ. ಮನವಿ ಮಾಡಿದೆ.

## ಯುದ್ಧ ವಿರೋಧಿ ದಿನ:

ಡಬ್ಲ್ಯೂ ಎಫ್.ಟಿ ಯು. ಕರೆಯ ಮೇರೆಗೆ ಸೆಪ್ಟೆಂಬರ್ 1 ರಂದು 'ಯುದ್ಧ ವಿರೋಧಿ ದಿನಾಚರಣೆ' ನಡೆಯಲಿದ್ದು, ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ತನ್ನ ಎಲ್ಲಾ ಕಾರ್ಯಕರ್ತರಿಗೂ ಪಿ. ಬಿ. ಕರೆ ನೀಡಿದೆ.

## ಆರು ಪಕ್ಷಗಳ ಜಂಟೀ ಕಾರ್ಯಾಚರಣೆ:

ಮಾನವಕುಲದ ಅಸ್ತಿತ್ವಕ್ಕೇ ಗಂಡಾಂತರ ಉಂಟುಮಾಡಿರುವ ಸಾಮ್ರಾಜ್ಯಶಾಹಿ ಚಟುವಟಿಕೆಗಳ ವಿರುದ್ಧ ಚಳುವಳಿ ಹೂಡುವುದು ಹಾಗೂ ಮತ್ತೆರಡು ಸಮಸ್ಯೆಗಳತ್ತ ಜಂಟೀ ಸಮಿತಿಯು ಗಮನಹರಿಸಿದೆ:

1. ಲೆಬನಾನಿನ ಮೇಲೆ, PLO ವನ್ನು ನಾಶಮಾಡುವ ಉದ್ದೇಶವಿಟ್ಟುಕೊಂಡಿರುವ ಇಸ್ರೇಲಿನ ದಾಳಿ;

2. ಹಿಂದೂಮಹಾಸಾಗರದಲ್ಲಿ ಸಾಮ್ರಾಜ್ಯಶಾಹಿ ಅಮೇರಿಕೆಯ ಮಿಲಿಟರಿ ನೆಲೆ ಮತ್ತು ಪಾಕೀಸ್ತಾನಕ್ಕೆ ಶಸ್ತ್ರಸ್ತ್ರಗಳನ್ನೊದಗಿಸುತ್ತಿರುವುದು.

ಕಾರಣ ಆರು ಪಕ್ಷಗಳು ಜಂಟಿಯಾಗಿ ಪ್ರಾರಂಭಿಸಿರುವ ಈ ಚಳುವಳಿಗೆ ದೇಶದ ಎಲ್ಲಾ ಜನವಿಭಾಗವೂ ಬೆಂಬಲಿಸುವುದೆಂದು ಪಿ.ಬಿ. ಆಶಿಸಿದೆ.

ಪಿ. ಎಲ್. ಓ. ನ ಧೀರ ಹೋರಾಟಗಾರರಿಗೆ ಸಹಾಯ ಮಾಡಲು ಮತ್ತು ಸೌಹಾರ್ಧ ಬೆಂಬಲವನ್ನು ಸೂಚಿಸಲು ಜನಾಭಿಪ್ರಾಯವನ್ನು ಮೂಡಿಸುವ ಕಾರ್ಯದಲ್ಲಿ ನಿರತರಾಗಿರುವ ಪಕ್ಷದ ಎಲ್ಲಾ ಶಾಖೆ ಮತ್ತು ಸದಸ್ಯರುಗಳನ್ನು ಪಿ. ಬಿ. ಅಭಿನಂದಿಸಿದೆ.

ಅಣು ಯುದ್ಧವನ್ನು ಸಾಧ್ಯಗೊಳಿಸುವ ಆಕ್ರಮಣಕಾರಿ ಚಟುವಟಿಕೆಗಳಿಂದ ಮಾನವೀಯತೆಗೊದಗಿರುವ ಗಂಡಾಂತರವನ್ನು ಅಥವಾ ಹಿಂದೂ ಮಹಾಸಾಗರದಲ್ಲಿನ ಅಮೇರಿಕಾದ ಮಿಲಿಟರಿ ನೆಲೆಯಿಂದ ಭಾರತಕ್ಕಿರುವ ಅಪಾಯ, ಪಶ್ಚಿಮ ಏಷ್ಯಾ ಮತ್ತು ಭಾರತದ ಗಡಿಗಳಲ್ಲಿನ ಬೆಳವಣಿಗೆ ಇವುಗಳ ಬಗ್ಗೆ ಬಹುಪಾಲು ಜನತೆಗೆ ಇನ್ನೂ ಅರಿವಾಗಿಲ್ಲದಿರುವುದು ವಿಷಾದಕರ ಸಂಗತಿಯಾಗಿದೆ. ಈ ಬಗ್ಗೆ ಕಾರ್ಯಪ್ರವೃತ್ತರಾಗುವುದು ಬಿಟ್ಟು ಇತರ ಬಂಡವಾಳಶಾಹಿ ಭೂಮಾಲೀಕ ವಿರೋಧ ಪಕ್ಷಗಳು ತಮ್ಮ ತಮ್ಮಲ್ಲಿ ಕಚ್ಚಾಡುತ್ತಾ, ರಷ್ಯಾ ವಿರೋಧಿ, ಕಮ್ಯುನಿಸ್ಟ್ ವಿರೋಧಿ ಪ್ರಚಾರದಲ್ಲಿ ನಿರತವಾಗಿವೆ. ಕೆಲವು ವಿರೋಧ ಪಕ್ಷಗಳು ಅರಬ್ ದೇಶಗಳ ವಿರುದ್ಧವಾಗಿ, ಪ್ರಮುಖವಾಗಿ ಪ್ಯಾಲೆಸ್ತೀನ್ ವಿರುದ್ಧವಾಗಿ ಇಸ್ರೇಲ್ ಚಟುವಟಿಕೆಗಳನ್ನು ಬೆಂಬಲಿಸುವ ಮೂಲಕ ಸಾಮ್ರಾಜ್ಯಶಾಹಿ ಪ್ರಚಾರಕ್ಕೆ ಪೂರಕವಾಗಿಯೇ ಸಹಾಯ ಮಾಡುತ್ತಿವೆ. ಈ ಸಾಮ್ರಾಜ್ಯಶಾಹಿ ಪರ ಪ್ರಚಾರವನ್ನು ತಡೆಯುವುದು ಎಲ್ಲಾ ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳ ಕೆಲಸವಾಗಿದೆ.

ಆರು ಪಕ್ಷಗಳ ಮನವಿಯಲ್ಲಿ ವಿವರಿಸುವಂತೆ, ಸಾಮ್ರಾಜ್ಯಶಾಹಿ ಆಕ್ರಮಣಕಾರಿ ಚಟುವಟಿಕೆಗಳ ವಿರುದ್ಧ ಜನತೆಯ ಒಗ್ಗಟ್ಟು, ದೇಶದ ಸ್ವಾತಂತ್ರ್ಯ ಮತ್ತು ಜಗತ್ತಿನ ಶಾಂತಿ ರಕ್ಷಣೆಯನ್ನು ಪಾಲಿಸುವುದೆಂದು ಪಿ. ಬಿ. ಅಭಿಪ್ರಾಯಪಡುತ್ತದೆ.

## ಪ್ರಧಾನಿಯ ಯು.ಎಸ್.ಎ. ಭೇಟಿ:

ಕೆಲವು ಬಂಡವಾಳಶಾಹಿ ಪತ್ರಿಕೆಗಳು ಬರೆದಂತೆ, ಪ್ರಧಾನಿಯವರ ಇತ್ತೀಚಿನ ಅಮೇರಿಕಾ ಭೇಟಿಯು ಯಾವುದೇ ಫಲವನ್ನು ನೀಡಿಲ್ಲವೆಂದು ಪಿ. ಬಿ. ಅಭಿಪ್ರಾಯಪಡುತ್ತದೆ. ಪ್ರಧಾನಿಯವರ ಭೇಟಿಯ ಬಗ್ಗೆ ಅಮೇರಿಕದ ವಾರ ಪತ್ರಿಕೆಯೊಂದು—"ಹಿಂದಿನದನ್ನು ಮರೆತು ಬಿಡೋಣ, ಆದದ್ದು ಆಗಲಿ ಎನ್ನುವಂತೆ ನಡೆದ ಸಾಂಪ್ರದಾಯಿಕವಷ್ಟೇ" —ಎಂದು ಬರೆಯಿತು.

ಕುಸಿಯುತ್ತಿರುವ ಆರ್ಥಿಕತೆ ಮತ್ತು ಕೈಗಾರಿಕೆಗಳನ್ನು ಕಾಪಾಡಲು ಇನ್ನೂ ಹೆಚ್ಚಿನ ನೆರವನ್ನು ಕೇಳುವ ಉದ್ದೇಶದ ಭೇಟಿಯು, ತಾಂತ್ರಿಕತೆ ಮತ್ತು ದೊಡ್ಡ ಮೊತ್ತದಲ್ಲಿ ಬಂಡವಾಳವನ್ನು ಕೊಡುವ ವಿಷಯದಲ್ಲಿ ಅಮೇರಿಕ ಕೆಲವು ರೀತಿಯ ರಿಯಾಯಿತಿಗಳನ್ನು ತೋರಿದ್ದರೂ ಒಟ್ಟಾರೆ ನಿರಾಶದಾಯಕವಾಗಿದೆ. ಇಂತಹ ಅಲ್ಪ ಮಟ್ಟದ ರಿಯಾಯಿತಿಗಳು ಭಾರತದ ಕುಸಿಯುತ್ತಿರುವ ಆರ್ಥಿಕತೆಗೆ ನಿಜವಾದ ಪರಿಹಾರವಲ್ಲ.

ಭಾರತ ಮತ್ತು ರಷ್ಯಾ ಬಾಂಧವ್ಯಕ್ಕೆ ಅಡ್ಡಗಾಲು ಹಾಕುವ ಅಮೇರಿಕದ ಯತ್ನ ವಿಫಲವಾಗಿದೆ. ಆಫಘಾನಿಸ್ತಾನ್, ಕಂಪೂಚಿಯ ಮತ್ತು ಇಸ್ರೇಲ್ ಆಕ್ರಮಣ—ಇತ್ಯಾದಿ ವಿಷಯಗಳಿಗೆ ಸಂಬಂಧಪಟ್ಟಂತೆ ಭಾರತದ ನಿಲುವನ್ನು ಪ್ರಧಾನಿಯವರು ಹೇಳಿರುವುದು ಸ್ವಾಗತಾರ್ಹವಾಗಿದೆ. ಇದು ಸಾಮ್ರಾಜ್ಯಶಾಹಿ ಅಮೇರಿಕಕ್ಕೆ ನಮ್ರವಾಗಿಯೇ ಮುಖಮುರಿದಂತಾಗಿದೆ.

## ದ್ವಿಗುಣಗೊಳ್ಳುತ್ತಿರುವ ಬಿಕ್ಕಟ್ಟು :

ದೇಶದ ಆರ್ಥಿಕ ಬಿಕ್ಕಟ್ಟು ದ್ವಿಗುಣಗೊಳ್ಳುತ್ತಿದೆ. ಹಣದುಬ್ಬರವನ್ನು ತೊಡೆದು ಹಾಕಲಾಗಿದೆ ಎಂಬಂತೆ ಆಡುತ್ತಿರುವ ಮಾತುಗಳು ಆಧಾರ ರಹಿತವಾಗಿವೆ. ಎಲ್ಲಾ ವಸ್ತುಗಳ ಬೆಲೆಗಳು ಗಣನೀಯವಾಗಿ ಹೆಚ್ಚುತ್ತಿವೆ. ಬೆಳೆಯುತ್ತಿರುವ ನಿರುದ್ಯೋಗ, ಕಾರ್ಖಾನೆಗಳ ಬೀಗಮುದ್ರೆ ಮತ್ತು ಮುಚ್ಚುವಿಕೆ ಇವೆಲ್ಲ ಹಣದುಬ್ಬರದ ಇತರೆ ಚಿನ್ಹೆಗಳಾಗಿವೆ. ಹತ್ತಿ ಮತ್ತು ಸೆಣಬು ಕೈಗಾರಿಕೆಗಳನ್ನೊಳಗೊಂಡಂತೆ ಇನ್ನೂ ಅನೇಕ ಕೈಗಾರಿಕೆಗಳಲ್ಲಿ ನಿರಂತರವಾಗಿ ಹೋರಾಟಗಳು ನಡೆಯುತ್ತಿವೆ. ಆಯವ್ಯಯ ಪತ್ರದಲ್ಲೂ, ಅಂತರಾಷ್ಟ್ರೀಯ ಉದ್ದಿಮೆ ಬಾಕಿ ಪಾವತಿಯಲ್ಲೂ ಕೊರತೆ ಹೆಚ್ಚುತ್ತಿದೆ.

ಇದಕ್ಕೆಲ್ಲ ಪರಿಹಾರ, ಐ.ಎಂ.ಎಫ್. ಮತ್ತು ವಿಶ್ವ ಬ್ಯಾಂಕ್‌ನಿಂದ ಅಧಿಕ ಪ್ರಮಾಣದಲ್ಲಿ 'ನೆರವು' ಪಡೆಯುವುದೆಂದು ಸರಕಾರ ಬಗೆದಿದೆ. ಆದ್ದರಿಂದ, ಆರ್ಥಿಕ ಸ್ಥಿತಿಯು ವಿಷಮ ವೃತ್ತದಲ್ಲಿ ಸಿಲುಕಿದ್ದು ಅದು ಇನ್ನೂ ಹೆಚ್ಚೆಚ್ಚು ನೆರವನ್ನು ಪಡೆಯುವ ಸ್ಥಿತಿಗೆ ದಬ್ಬುತ್ತಿದೆ.

## ಹೆಚ್ಚುತ್ತಿರುವ ದಬ್ಬಾಳಿಕೆ:

ಕಾರ್ಮಿಕ ವರ್ಗ ಮತ್ತು ಇತರೆ ದುಡಿಯುವ ಜನತೆ ಈ ಸ್ಥಿತಿಯಲ್ಲಿ ತಮ್ಮ ಜೀವನ ಮತ್ತು ಕೆಲಸದ ಸ್ಥಿತಿಗತಿಗಳ ರಕ್ಷಣೆಗಾಗಿ ಹೋರಾಟಮಾಡುವಾಗ, ದಮನಕಾರಿ ಶಾಸನಗಳ ಮೂಲಕ ಬಗ್ಗುಬಡಿಯಲಾಗುತ್ತಿದೆ. ಸಂಸತ್ತಿನ ಮುಂದಿರುವ ಮೂರು ಕಾರ್ಮಿಕ ವಿರೋಧಿ ಶಾಸನಗಳು ಮತ್ತು ಬಿಹಾರದ ಪತ್ರಿಕಾ ನಿರ್ಬಂಧನಾ ಶಾಸನ ಇವುಗಳು ಇತ್ತೀಚಿಗೆ ಸರಕಾರ ಪ್ರಜಾಪ್ರಭುತ್ವದ ಮೇಲೆ ಮಾಡಿದ ದಾಳಿಗೆ ಉದಾಹರಣೆಗಳು. ಇಂತಹ ದಬ್ಬಾಳಿಕೆಯನ್ನು, ಕಾರ್ಮಿಕ ಸಂಘಟನೆಗಳು, ಪತ್ರಕರ್ತರು, ರಾಜಕೀಯ ಪಕ್ಷಗಳು ಮತ್ತು ಇತರೆ ಜನವಿಭಾಗ ಪ್ರತಿಭಟಿಸಿವೆ ಮತ್ತು ಪ್ರತಿಭಟಿಸುತ್ತಲೂ ಇವೆ. ಈ ಪ್ರತಿಭಟನೆ ಹೆಚ್ಚು ಶಕ್ತಿಯನ್ನು ಪಡೆದುಕೊಂಡು ಮುಂದುವರೆಯುವದು ಅವಶ್ಯ.

## ಛಿದ್ರಕಾರಿ ಶಕ್ತಿಗಳ ವಿರುದ್ಧ ಎಚ್ಚರಿಕೆ :

ಛಿದ್ರಕಾರಿ ಶಕ್ತಿಗಳು ಹೆಚ್ಚೆಚ್ಚು ವಿಪತ್ತನ್ನು ಒಡ್ಡುತ್ತಿವೆ. ಈ ಗಂಡಾಂತರದ ಕುರಿತು ಪಿ. ಬಿ. ಕಳೆದ ಸಭೆಯಲ್ಲೇ ಎಚ್ಚರಿಸಿತ್ತು. ಖಲಿಸ್ಥಾನಿಗಳು, ದಲ್ ಖಲ್ಸಾಗೆ ಸೇರಿದವರು, ಬಿಂದ್ರನ್‌ವಾಲಾ ಗುಂಪು ಇತ್ಯಾದಿ ಛಿದ್ರಕಾರಿ ಗುಂಪುಗಳು ಒಟ್ಟಿಗೆ ಸೇರಿ ನಡೆಸುತ್ತಿರುವ ಸಿಖ್‌ರ ಛಿದ್ರಕಾರಿ ಚಳುವಳಿಗೆ ಅಕಾಲಿದಳವೂ ಸೇರಿ ನಡೆಸುತ್ತಿರುವ ಐಕ್ಯ ಚಳುವಳಿ ಇಡೀ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ವಿರೋಧವಾಗಿದೆ. ಪಂಜಾಬಿನಲ್ಲಿ ಈ ಛಿದ್ರಕಾರಿ ಶಕ್ತಿಗಳ ವಿರುದ್ಧ ರಾಜ್ಯದಾದ್ಯಂತ ಚಳುವಳಿಯನ್ನು ಸಂಘಟಿಸುತ್ತಿರುವ ಸಿ. ಪಿ. ಐ. (ಎಂ) ರಾಜ್ಯ ಘಟಕದ ಎಲ್ಲ ಸದಸ್ಯರಿಗೂ ಪಿ. ಬಿ. ಅಭಿನಂದನೆ ಸಲ್ಲಿಸಿದೆ.

ಜಮ್ಮು ಮತ್ತು ಕಾಶ್ಮೀರ ರಾಜ್ಯದ ಇಸ್ಲಾಂ ಮೂಲಭೂತವಾದಿಗಳು ಎಲ್ಲ ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳಿಗೆ ಅಪಾಯ ಒಡ್ಡುತ್ತಿವೆ. ಆಸ್ಸಾಂ ಮತ್ತು ಇತರ ಈಶಾನ್ಯ ಪ್ರದೇಶಗಳಲ್ಲೂ ಛಿದ್ರಕಾರಿ ಶಕ್ತಿಗಳು ವಿದೇಶಿ ಸಾಮ್ರಾಜ್ಯಶಾಹಿ ಶಕ್ತಿಗಳ ಸಂಪೂರ್ಣ ಬೆಂಬಲ ಪಡೆಯುತ್ತಿವೆ. ಬೆಳೆಯುತ್ತಿರುವ ಇಂತಹ ಛಿದ್ರಕಾರಿ ಚಟುವಟಿಕೆಗಳನ್ನು ತಡೆಯುವುದರ ಬದಲಾಗಿ ಕೆಲವು ರಾಜಕೀಯ ಪಕ್ಷಗಳು ನೆರವು ನೀಡುವುದರ ಮೂಲಕ ಬೆಂಬಲಿಸುತ್ತಿವೆ.

ಆರ್. ಎಸ್. ಎಸ್. ಮತ್ತು ವಿಶ್ವ ಹಿಂದೂ ಪರಿಷತ್ ಇಂತಹ ಕೋಮುವಾದಿ ಸಂಘಟನೆಗಳ ಮೂಲಕ 'ಹಿಂದೂ ರಾಷ್ಟ್ರ' ಸಿದ್ಧಾಂತವನ್ನು ಬಹಳ ಚುರುಕಿನಿಂದ ಪ್ರಚಾರ ನಡೆಸುತ್ತಿರುವುದು ಇನ್ನೊಂದು ಪ್ರಮುಖ ಗಂಡಾಂತರವಾಗಿದೆ. ಹಿಂದೂ ಮತ್ತು ಮುಸ್ಲಿಂ ಕೋಮುವಾದಿ ಚಟುವಟಿಕೆಗಳ ವಿರುದ್ಧ ಅವಿರತ ಹೋರಾಟ ನಡೆಸಬೇಕೆಂದು ಸಿ ಪಿ.ಐ. (ಎಂ) ಮೊದಲಿನಿಂದಲೂ ಸ್ಪಷ್ಟವಾಗಿ ಹೇಳುತ್ತದೆ.

## ಅಧಿಕಾರಿಶಾಹಿ ಕ್ರಮ :

ಹರಿಯಾಣಾದ ರಾಜ್ಯಪಾಲರನ್ನು ಉಪಯೋಗಿಸಿಕೊಂಡು ಸೋತ ಕಾಂಗ್ರೆ ಪಕ್ಷದ ನಾಯಕನನ್ನು ರಾಜ್ಯದ ಮುಖ್ಯ ಮಂತ್ರಿ ಮಾಡಿದ್ದು, ಅತ ಪ್ರತಿಯಾಗಿ ತನ್ನ ಎಲ್ಲಾ ಅಧಿಕಾರವನ್ನೂ ಬಳಸಿಕೊಂಡು ವಿರೋಧಿ ಬಣದಿಂದ ಪಕ್ಷಾಂತರಿಗಳನ್ನು ಸಂಘಟಿಸಿದ್ದು, ಈ ಎಲ್ಲ ಕಾರಣಗಳಿಂದ ಆಳುವ ಕಾಂಗ್ರೆ ಪಕ್ಷವು ಅಧಿಕಾರಿಶಾಹಿಯತ್ತ ನಡೆಯುತ್ತಿರುವುದನ್ನು ಕಾಣುತ್ತೇವೆ. ಮತ್ತು ಭಾರತ ಒಕ್ಕೂಟದ ರಾಷ್ಟ್ರಪತಿಯು ಪ್ರಧಾನಿಯ ಮಾತಿನ ಮಟ್ಟಕ್ಕೇ ಮಾತನಾಡುವ ವ್ಯಕ್ತಿಯಾಗಿರಬೇಕೆಂದು ಆ ಪಕ್ಷವು ಮಾಡಿದ್ದ ಒತ್ತಾಯದಿಂದಲೂ ಇದು ಸ್ಪಷ್ಟವಾಗುತ್ತದೆ.

## ಆಳುವ ಪಕ್ಷದಲ್ಲಿ ಬಿಕ್ಕಟ್ಟು :

ಆಳುವ ಪಕ್ಷದ ಸಂಘಟನೆಯ ಒಳಗೂ ತನ್ನ ಅಭಿಪ್ರಾಯ ಮತ್ತು ಆಚರಣೆಗಳೆರಡರಲ್ಲೂ ಪ್ರಜಾಪ್ರಭುತ್ವ ಕಾರ್ಯಾಚರಣೆಯನ್ನು ಕಡೆಗಣಿಸುತ್ತಿರುವುದು ಮುಂದುವರೆದಿದೆ. ಆಳುವ ಪಕ್ಷ, ಮುಖ್ಯ ಮಂತ್ರಿಗಳನ್ನು, ಪಿ.ಸಿ.ಸಿ.ಯ ಪ್ರಮುಖರನ್ನು ಬದಲಿಸುವುದು, ಮರು ಬದಲಿಸುವುದನ್ನು ಕಂಡಾಗ, ಎಲ್ಲರನ್ನೂ ತನ್ನ ಗುಲಾಮರನ್ನಾಗಿ ಮಾಡಿಕೊಳ್ಳುವ ಹೈಕಮಾಂಡ್‌ನ ಏಕೈಕ ಉದ್ದೇಶ ಸ್ಪಷ್ಟವಾಗುತ್ತದೆ.

ಇಂತಹ ಪ್ರವೃತ್ತಿ, ಅಂತುಳೆ ಪ್ರಕರಣದಲ್ಲಿ ಕಂಡಂತೆ, ಎಷ್ಟೇ ಭ್ರಷ್ಟನಾಗಿದ್ದರೂ ಕೂಡ ಅಧಿಕಾರದಲ್ಲಿ ತನಗಿಷ್ಟ ಬಂದಂತೆ ಮುಂದುವರೆಯುವ ಅವಕಾಶ ಕಲ್ಪಿಸುತ್ತದೆ. ಕೆಲವು ಲಂಚಗುಳಿತನಗಳನ್ನು ಬಯಲಿಗೆಳೆದಾಗ್ಯೂ ಅಂತುಳೆ ಪ್ರಕರಣದಲ್ಲಾದಂತೆ, ಪ್ರಕರಣಕ್ಕೆ ಸಂಬಂಧಪಟ್ಟ ಪಕ್ಷದ ಮೇಲಿನ ಮುಖಂಡರೆಲ್ಲರೂ ಸುರಕ್ಷಿತವಾಗಿದ್ದು, ಇಡೀ ಪ್ರಕರಣವನ್ನು ಮುಚ್ಚಿಹಾಕುವ ಸರ್ವ ಪ್ರಯತ್ನಗಳು ನಡೆದದ್ದುಂಟು.

ಕಾಂಗ್ರೆ ಪಕ್ಷವು ಈ ರೀತಿಯಲ್ಲಿ ಅಧಿಕಾರಿಶಾಹಿ, ಭ್ರಷ್ಟಾಚಾರ ಮತ್ತು ಗೊಂದಲಮಯ ಪಕ್ಷವೆಂದು ಜನಗಳ ಮುಂದೆ ಬಹಿರಂಗವಾಗುತ್ತಿರುವಾಗ, ಸಮರ್ಥ ಪರ್ಯಾಯವನ್ನೊದಗಿಸಲು ಇತರ ಬೂರ್ಜ್ವಾ ವಿರೋಧ ಪಕ್ಷಗಳು ಅಸಮರ್ಥವೆನ್ನುವುದನ್ನು ದೃಢಪಡಿಸಿವೆ. ಮುಖಂಡರುಗಳ ಒಳಜಗಳ ಮತ್ತು ಗುಂಪು ಚಿಲ್ಲರೆ ಜಗಳಗಳ ಜೊತೆಗೆ ಆಳುವ ಪಕ್ಷ ಅನುಸರಿಸುತ್ತಿರುವ ಸಾಮಾಜಿಕ-ಆರ್ಥಿಕ ಧೋರಣೆಗಳಿಗೆ ಪರ್ಯಾಯವಾಗಿ ವಿಭಿನ್ನ ಧೋರಣೆಗಳಿಲ್ಲದಿರುವುದೂ ಬೂರ್ಜ್ವಾ ವಿರೋಧ ಪಕ್ಷಗಳು ಒಂದಾಗಲು ತೊಡಕಾಗುತ್ತಿದೆ.

## ಸಂಯುಕ್ತ ಕಾರ್ಯಾಚರಣೆ ಅತ್ಯಗತ್ಯ :

ಆಳುವ ಮತ್ತು ಬೂರ್ಜ್ವಾ ವಿರೋಧ ಪಕ್ಷಗಳ ಕಾರ್ಯಕ್ರಮಗಳಿಗೆ ಮೂಲಭೂತವಾಗಿ ವಿಭಿನ್ನ ಕಾರ್ಯಕ್ರಮಗಳನ್ನು ಹೊಂದಿರುವ ಎಡಪಕ್ಷಗಳು

(ಕಡೇ ಪುಟ ನೋಡಿ)

ರಾಷ್ಟ್ರವ್ಯಾಪ್ತ "ಪತ್ರಿಕಾ ಸ್ವಾತಂತ್ರ್ಯ"ವೆಂದರೇನು ಎಂಬ ಚರ್ಚೆ ಇದೀಗ ಆರಂಭಗೊಂಡಿದೆ. ಇದಕ್ಕೆ ಅವಕಾಶ ಮಾಡಿಕೊಟ್ಟವರು ಶ್ರೀ ಆರ್. ವೆಂಕಟರಾಮನ್, ನಮ್ಮ ಕೇಂದ್ರದ ಗೃಹ ಸಚಿವರು. ಬಿಹಾರ್ ಮತ್ತು ಇತರೆ ರಾಜ್ಯಗಳಲ್ಲಿ ಪತ್ರಿಕಾ ಸ್ವಾತಂತ್ರ್ಯವನ್ನು ನಿಯಂತ್ರಿಸಲು ನಡೆಯುತ್ತಿರುವ ಪ್ರಯತ್ನಗಳ ಬಗ್ಗೆ, ಗೃಹ ಸಚಿವರ ಗಮನ ಸೆಳೆದಾಗ, ಅವರು ಬಿಹಾರದ ಇತ್ತೀಚಿನ ವಿಧೇಯಕವನ್ನು ಸಮರ್ಥಿಸಿಕೊಂಡು ಇಂಥ ವಿಧೇಯಕಗಳ ಅಗತ್ಯತೆಯನ್ನು ಕುರಿತು ಮಾತಾಡಿದುದರಿಂದ, ಪತ್ರಿಕಾ ಸ್ವಾತಂತ್ರ್ಯವೆಂದರೇನು? ಎಂಬ ಚರ್ಚೆಗೆ ಅವಕಾಶ ಮಾಡಿಕೊಟ್ಟಿರುತ್ತಾರೆ.

ಪತ್ರಿಕಾ ಸ್ವಾತಂತ್ರ್ಯವೆಂದರೇನು? ಭಾರತ ಸಂವಿಧಾನದಲ್ಲಿ ಪತ್ರಿಕೆಗಳಿಗೆ ಎಷ್ಟು ಸ್ವಾತಂತ್ರ್ಯವಿದೆ? ಎಂಬುವುದನ್ನು ತಿಳಿಯುವ ಮುನ್ನ, ಬಿಹಾರ್ ರಾಜ್ಯ ತಂದಿರುವ ಮಸೂದೆಯನ್ನು ನಮ್ಮ ಕೇಂದ್ರದ ಗೃಹ ಸಚಿವರು ಸ್ವಾಗತಿಸಿದವರಾದುದರಿಂದ, ಆ ಮಸೂದೆ ಏನು ಹೇಳುತ್ತದೆ ಎಂಬುವುದನ್ನು ನೋಡೋಣ.

ಈ ಮಸೂದೆಯ ಹೆಸರು ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಮತ್ತು ಶಿಕ್ಷಾರ್ಹ ಅಪರಾದಗಳ ಪಟ್ಟಿಗೆ ತಿದ್ದುಪಡಿ 1982. ವಿಧೇಯಕ ಇಡೀ ಬಿಹಾರಕ್ಕೆ ಅನ್ವಯಿಸುತ್ತದೆ, ಮತ್ತು ತತ್‌ಕ್ಷಣದಿಂದಲೇ ಜಾರಿಗೆ ಬರುತ್ತದೆ.

ಮೇಲ್ಕಂಡ ಮಸೂದೆಯ ಪೂರ್ಣ ಪಾಠ 1 ರಲ್ಲಿ ತಿಳಿಸಿರುವಂತೆ ಇದು ಈ ದಿನ ಬಿಹಾರ್ ರಾಜ್ಯಕ್ಕೆ ಅನ್ವಯಿಸುತ್ತದೆ ಎಂದು ಹೇಳುತ್ತದೆ. ಈ ಮಸೂದೆಯ ರೂಪದಲ್ಲಿಯೆ ಒಂದು ಮಸೂದೆ ಈಗ ಮದರಾಸಿನ ಅಸ್ತಿತ್ವದಲ್ಲಿದೆ. ಇಂಥ ಮಸೂದೆಯನ್ನು ಲೋಕ ಸಭೆಯಲ್ಲಿ ನಮ್ಮ ಗೃಹ ಸಚಿವರು ಸಮರ್ಥಿಸಿಕೊಂಡಿರುವುದರಿಂದ ಕರ್ನಾಟಕದಲ್ಲಾಗಲಿ ಅಥವ ಇತರೆ ರಾಜ್ಯಗಳಲ್ಲಾಗಲಿ ಇಂಥ ಮಸೂದೆ ಬರುವುದಿಲ್ಲವೆಂದು ಹೇಳುವಂತಿಲ್ಲ.

ಮಸೂದೆಯ ಪೂರ್ಣ ಪಾಠದ ವಿಭಾಗ (2) ರಲ್ಲಿ ಈ ರೀತಿ ಇದೆ:

ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ (ಕೇಂದ್ರ ಸರಕಾರದ) EX II/V 1860 ಯ 292ನೇ ಪರಿಚ್ಛೇದಕ್ಕೆ ತಿದ್ದುಪಡಿ. 292ನೇ ಪರಿಚ್ಛೇದಕ್ಕೆ A ಎಂಬ ಹೊಸ ಪರಿಚ್ಛೇದವನ್ನು ಸೇರಿಸಲಾಗಿದೆ. ಈ ಕೆಳಕಂಡವು ತಿದ್ದುಪಡಿಯಾದ ಹೊಸ ನಿಯಮಾವಳಿಗಳು.

ಎ) ಅಸಭ್ಯವಾದ ಅಥವಾ "ಅಶ್ಲೀಲ" ನಿಂದೆಯಿಂದ ಕೂಡಿದ ಅಥವಾ ಬ್ಲಾಕ್ ಮೇಲ್ ಮಾಡುವ ಉದ್ದೇಶವುಳ್ಳ ಯಾವುದೇ ರೀತಿಯ ಬರವಣಿಗೆಯನ್ನು, ಛಾಯಾಚಿತ್ರಗಳನ್ನು ಮುದ್ರಿಸುಸುವುದು, ಅಥವಾ ಮುದ್ರಿಸಲು ಯತ್ನಿಸುವುದು, ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸುವುದು ಅಥವಾ ಪ್ರಸಾರಕ್ಕಾಗಿ ಕರ ಪತ್ರ ಹಂಚುವುದು, ದಿನ ಪತ್ರಿಕೆಗಳಲ್ಲಿ, ವಾರಪತ್ರಿಕೆ, ಮಾಸ ಪತ್ರಿಕೆಗಳಲ್ಲಿ ಪ್ರಕಟಿಸುವುದು ಅಪರಾಧ.

ಬಿ) ಇಂಥ ಅಸಭ್ಯ ಹಾಗೂ ಅಶ್ಲೀಲ ಮತ್ತು ಬ್ಲಾಕ್ ಮೇಲ್ ಮಾಡುವ ಉದ್ದೇಶವುಳ್ಳ ಅಥವಾ ಮುದ್ರಿಸಿದ ಪ್ರತಿಗಳನ್ನು ಇಟ್ಟುಕೊಂಡಿರುವುದು, ಮಾರಾಟ ಮಾಡುವುದು ಮತ್ತು ಪ್ರಕಟಿಸುವುದು ಅಪರಾಧ.

ಸಿ) ಈ ರೀತಿಯ ಉದ್ದೇಶವುಳ್ಳ ಚಿತ್ರಗಳನ್ನು ಯಾರಾದರೂ ಇಟ್ಟುಕೊಂಡಿದ್ದರೆ ಅಥವಾ ಅಂಥ ಉದ್ದೇಶದಿಂದ ಮುದ್ರಿಸಲು ಯತ್ನಿಸುತಿದ್ದಾರೆಂದು ಸಂಶಯ ಬಂದರೆ ಅವರನ್ನು ಬಂಧಿಸಬಹುದು.

ಡಿ) ಇಂಥ ಅಪರಾಧಾರ್ಹ ಪ್ರಕಟಣೆಗಳನ್ನು ಹಂಚುವುದು ಅಥವಾ ಇವನ್ನು ವ್ಯಾಪಾರವಾಗಿ ಮಾಡಿಕೊಂಡು ಲಾಭ ಸಂಪಾದಿಸುವುದು ಅಪರಾಧ. ಅಷ್ಟೇ ಅಲ್ಲ ಈ ರೀತಿ ಮಾಡುತ್ತಾರೆಂದು ಸಂಶಯ ಬಂದರೂ ಅಂಥವರನ್ನು ಬಂಧಿಸಿ ಶಿಕ್ಷೆಗೆ ಗುರಿಪಡಿಸಬಹುದು.

ಇ) ಇದುವರೆಗೆ ವಿವರಿಸಿದಂಥ ಅಪರಾಧಾರ್ಹಪ್ರಕಟಣೆಗಳುಳ್ಳ ಪತ್ರಿಕೆಗಳು ಯಾವುದೇ ಮೂಲದಿಂದ ಯಾರಿಂದಲಾದರೂ, ಗೊತ್ತಾದರೆ ಹಾಗೂ ಇಂಥ ಪತ್ರಿಕೆಗಳನ್ನು ಮಾರಾಟ ಮಾಡುವ ಮತ್ತು ಅದಕ್ಕಾಗಿ ಜಾಹಿರಾತು ನೀಡುವುದೂ ಅಪರಾಧ.

ಎಫ್) ಈ ಮೇಲೆ ವಿವರಿಸಿದ ಎಲ್ಲವೂ ಈ ಪರಿಚ್ಛೇಧದನ್ವಯ ಅಪರಾಧ.

ಈ ಅಪರಾಧ ಮಾಡಿದವರಿಗೆ (ಮೊದಲ ಬಾರಿಗೆ) ಎರಡು ವರ್ಷದ ವರೆಗೆ ಜೈಲು ಶಿಕ್ಷೆ ವಿಧಿಸಲಾಗುವುದು ಅಥವಾ ಎರಡನೆಯ ಬಾರಿಗೆ ಈ ಅಪರಾಧವೆಸಗಿದವರಿಗೆ ಜೈಲು ಶಿಕ್ಷೆ ಐದು ವರ್ಷಗಳವರೆಗೆ ವಿಧಿಸಲಾಗುವುದು. ಜತೆಗೆ ದಂಡ ತೆರಬೇಕಾಗುವುದು

ಈ ಮೇಲಿನ ಮಸೂದೆಯಲ್ಲಿ "ಅಶ್ಲೀಲ" "ಅಸಭ್ಯ" ಎಂಬ ಪದಗಳ ಬಳಕೆ ಇದೆ. ಯಾವುದು ಅಶ್ಲೀಲ, ಯಾವುದು ಶೀಲ, ಎಂಬ ವಿಚಾರ ಶತ ಶತಮಾನಗಳಿಂದ ಚರ್ಚೆಯಾಗುತ್ತ ಬಂದಿರುವ ವಿಷಯ. ನಮಗೆ ಶೀಲ ಅನಿಸಿದ್ದು, ಇನ್ನೊಬ್ಬರಿಗೆ ಅಶ್ಲೀಲವಾಗಿರುತ್ತದೆ. ಇನ್ನೊಬ್ಬರಿಗೆ ಶೀಲ ಅನಿಸಬಹುದಾದ್ದು ನಮಗೆ ಅಶ್ಲೀಲವಾಗಿ ಕಾಣಿಸುತ್ತದೆ. ಪಾಶ್ಚಾತ್ಯ ರಾಷ್ಟ್ರಗಳ ಮಹಿಳೆಯರು ಧರಿಸುವ ಉಡುಪು ನಮ್ಮ ಭಾರತದ ಸಂಪ್ರದಾಯದ ಮಹಿಳೆಯರು "ಶೀಲ"ವಾದದ್ದು ಎಂದು ಒಪ್ಪಿಕೊಳ್ಳಲು ತಯಾರಿರುವುದಿಲ್ಲ ಹಾಗೇಯೆ ನಮ್ಮ ಮಹಿಳೆಯರು ತೊಡುವ ಉಡುಪುಗಳನ್ನು ಪಾಶ್ಚಾತ್ಯ ರಾಷ್ಟ್ರದವರು ನೋಡಿ, ವಿಚಿತ್ರವಾಗಿ ಕಾಣುವ ಇವರನ್ನು "ಅಶ್ಲೀಲ"ವಾಗಿದ್ದಾರೆ ಎಂದು ಭಾವಿಸಿಕೊಂಡರೆ ಆಶ್ಚರ್ಯವಿಲ್ಲ.

"ಅಶ್ಲೀಲ"ವೆಂದರೇನು ಎಂಬುವುದನ್ನು ಭಾರತ ದಂಢ ಸಂಹಿತೆ ಏನು ಹೇಳುತ್ತದೆ ಎಂಬುವುದನ್ನು ನೋಡೋಣ. ಈ ಸಂಹಿತೆಯ ಪ್ರಕರಣ 292 ಈ ರೀತಿ ಹೇಳುತ್ತದೆ.

"(1) (2)ನೇ ಒಳ ಪ್ರಕರಣದ ಉದ್ದೇಶಗಳಿಗಾಗಿ ಒಂದು ಪುಸ್ತಕ, ಕಿರು ಹೊತ್ತಿಗೆ, ಪತ್ರಿಕೆ, ಲೇಖ, ಚಿತ್ರ ವರ್ಣಚಿತ್ರ, ನಿರೂಪಣೆ, ಆಕೃತಿ, ಅಥವ ಯಾವುದೇ ಇತರ ವಸ್ತುವು, ಕಾಮ ಪ್ರಚೋದಕವಾಗಿದ್ದರೆ, ಅಥವ ಕಾಮುಕ ಆಸಕ್ತಿಯನ್ನು ತೃಪ್ತಿಪಡಿಸುವ ಅಥವ ಆದರ ಪರಿಣಾಮವು ಅಥವಾ (ಅದರಲ್ಲಿ ಎರಡು ಅಥವಾ ಹೆಚ್ಚು ಪ್ರತ್ಯೇಕ ಅಂಶಗಳು ಒಳಗೊಂಡಿರುವಲ್ಲಿ) ಆ ಅಂಶಗಳಲ್ಲಿ ಯಾವೊಂದರ ಪರಿಣಾಮವು, ಎಲ್ಲ ಸುಸಂಬದ್ಧ ಪರಿಸ್ಥಿತಿಗಳನ್ನು ಗಮನಿಸಿ ಒಟ್ಟಾಗಿ ಪರಿಗಣಿಸಿದಾಗ ಅದನ್ನು ಓದುವ, ನೋಡುವ ಅಥವಾ ಕೇಳುವ ಸಂಭವವಿರುವ ವ್ಯಕ್ತಿಗಳನ್ನು ನೀತಿಕೆಡಿಸುವಂತಹದಾಗಿದ್ದರೆ ಅಥವಾ ಭ್ರಷ್ಟಗೊಳಿಸುವಂತಹದಾಗಿದ್ದರೆ ಅವುಗಳನ್ನು ಅಶ್ಲೀಲಗಳೆಂದು ಭಾವಿಸತಕ್ಕದ್ದು". — ಎಂದು ಹೇಳುತ್ತದೆ.

"ಅಶ್ಲೀಲ"ದ ವಿಚಾರದ ಬಗ್ಗೆ ನ್ಯಾಯಾಲಯಗಳೇ ಒಂದು ಸಮ್ಮತ ಅಭಿಪ್ರಾಯಕ್ಕೆ ಬರದಿರುವಾಗ ಬಿಹಾರ ರಾಜ್ಯದಲ್ಲಿ ಇಂತಹದೊಂದು ಮಸೂದೆ ಬಂದಿದ್ದು, "ತನಗೆ ಅಶ್ಲೀಲ" ಅನ್ನಿಸಿದ್ದರ ಮೇಲೆ ಸರ್ಕಾರ ಪೋಲಿಸರ ಮೂಲಕ ಕ್ರಮತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಂಡಿದೆ ಎಂಬುದನ್ನು ಓದುಗರು ಗಮನಿಸಬೇಕಾದ ವಿಚಾರ.

ಭಾರತ ಸಂವಿಧಾನವು ನೀಡಿರುವ ಸ್ವಾತಂತ್ರ್ಯಗಳಲ್ಲಿ ಪತ್ರಿಕಾ ಸ್ವಾತಂತ್ರ್ಯವೆಂದರೇನು ಎಂಬುದನ್ನು ಎಲ್ಲೂ ಸಂವಿಧಾನದಲ್ಲಿ ಉಲ್ಲೇಖಿಸಿಲ್ಲವಾದರೂ, ಭಾರತವು ತನ್ನ ರಾಜ್ಯ ಆಡಳಿತ ಪದ್ಧತಿಗೆ ಪ್ರಜಾಪ್ರಭುತ್ವ ಪದ್ಧತಿಯನ್ನು ಅಳವಡಿಸಿಕೊಂಡಿರುವುದರಿಂದ ಪ್ರಜಾಪ್ರಭುತ್ವದಲ್ಲಿ ಪತ್ರಿಕೆಯ ಸ್ಥಾನಮಾನವೇನು? ಎಂಬುದನ್ನು ನಾವು ನೋಡಬೇಕಿದೆ ಸಂವಿಧಾನದಲ್ಲಿ ಇದರ ಸ್ಥಾನ ಯಾವುದು, ಸಂವಿಧಾನದಲ್ಲಿ ಹೇಳಿರುವ ಅಭಿವ್ಯಕ್ತಿ ಸ್ವಾತಂತ್ರಕ್ಕು ಪತ್ರಿಕಾ ಸ್ವಾತಂತ್ರಕ್ಕು ಸಂಬಂಧವಿದೆಯೇ ಎಂಬ ಇವೇ ಮೊದಲಾದ ಪ್ರಶ್ನೆಗಳನ್ನು ನಾವು ಪರಿಶೀಲಿಸಬೇಕಾಗುತ್ತದೆ.

## ಸಂವಿಧಾನ ಮತ್ತು

ಭಾರತದ ಪ್ರಜೆಗೆ ಸಂವಿಧಾನ ದತ್ತವಾದ ಹಕ್ಕುಗಳಾದ ಅಭಿವ್ಯಕ್ತಿ ಸ್ವಾತಂತ್ರ್ಯ; ಸಂಘಟನಾ ಸ್ವಾತಂತ್ರ್ಯ; ಸಂಚಾರಿ ಸ್ವಾತಂತ್ರ್ಯ; ಸರ್ವೋಚ್ಚ ನ್ಯಾಯಾಲಯಕ್ಕೆ, ಶ್ರೇಷ್ಠ ನ್ಯಾಯಾಲಯಕ್ಕೆ ಮನವಿ ಸಲ್ಲಿಸುವ ಸ್ವಾತಂತ್ರ್ಯ ಮೊದಲಾದವು ಸಂವಿಧಾನದ ಹಲವಾರು ವಿಧಿಗಳಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಅಭಿವ್ಯಕ್ತಿ ಸ್ವಾತಂತ್ರ್ಯವೆಂದರೇನು ಯಾವುದು ಎಂಬುದನ್ನು ಸಂವಿಧಾನವು ಸ್ಪಷ್ಟವಾಗಿ ತಿಳಿಸದೇ ಇರುವುದರಿಂದ ಅಭಿವ್ಯಕ್ತಿ ಸ್ವಾತಂತ್ರ್ಯವೆಂದರೇನು?, ವಿಚಾರ ಸ್ವಾತಂತ್ರ್ಯವೆಂದರೇನು? ಪತ್ರಿಕಾ ಸ್ವಾತಂತ್ರ್ಯವೆಂದರೇನು?— ಎಂಬ ಇವೇ ಬಹುಮುಖ್ಯವಾದ ಪ್ರಶ್ನೆಗಳು ಹಲವಾರು ಮೊಕದ್ದಮೆಗಳಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯದ ಮುಂದೆ ಬಂದು ಚರ್ಚಿಸಲ್ಪಟ್ಟಿದೆ.

ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವೆಂದರೆ ವ್ಯಕ್ತಿ ತನ್ನ ಅಭಿಪ್ರಾಯವನ್ನು, ನಿರ್ಣಯವನ್ನು ಸ್ವಾತಂತ್ರ್ಯವಾಗಿ ಬಾಯಿಯಲ್ಲಿ, ಅಕ್ಷರಗಳ ಮೂಲಕ, ಬರವಣಿಗೆಯ ಮೂಲಕ, ಚಿತ್ರಗಳ ಮೂಲಕ, ಸಂಜ್ಞೆಯ ಮೂಲಕ, ಸಂಕೇತ ಮೂಲಕ, ಚಿತ್ರ ಪತ್ರಗಳ ಮೂಲಕ, ಮೊದಲಾದ ಮಾಧ್ಯಮಗಳ ಮೂಲಕವು ವ್ಯಕ್ತಿ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು–ಎಂಬುದನ್ನು ತಿಳಿಸುತ್ತದೆ.

ವ್ಯಕ್ತಿ ತನ್ನ ಅಭಿಪ್ರಾಯವನ್ನು ಇತರರಿಗೆ ವ್ಯಕ್ತಪಡಿಸಲು ಬಳಸಿಕೊಳ್ಳುವ ಹಲವು ಮಾಧ್ಯಮಗಳಲ್ಲಿ "ಪ್ರಕಟಣೆ"ಯು ಒಂದು, ಎಂದು ತಿಳಿದು ಬಂದಿರುವುದರಿಂದ 'ಪತ್ರಿಕಾ ಸಾತಂತ್ರ್ಯ'ವು ವ್ಯಕ್ತಿಯ ಅಭಿವ್ಯಕ್ತಿ ಸ್ವಾತಂತ್ರ್ಯದಲ್ಲಿಯೆ ಒಳಗೊಂಡಿರುತ್ತದೆ, ಎಂಬುವುದನ್ನು ಓದುಗರು ಗುರುತಿಸಿಕೊಳ್ಳಬಹುದು.

'ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ'ದಲ್ಲಿಯೇ ಇತರ ಜನರ ಅಭಿಪ್ರಾಯಗಳನ್ನು ಪ್ರಚಾರಮಾಡುವ ಅಥವಾ ಪ್ರಕಟಿಸುವ ಸ್ವಾತಂತ್ರ್ಯವು ಒಳಗೊಂಡಿರುತ್ತದೆ. 'ಪ್ರಕಟಿಸುವ' ಸ್ವಾತಂತ್ರ್ಯವೇ ಇಲ್ಲದೇ ಹೋದಲ್ಲಿ "ಪತ್ರಿಕಾಸ್ವಾತಂತ್ರ್ಯ"ವೆಂಬುದು ಇರಲು ಸಾಧ್ಯವೇ ಇರುತ್ತಿರಲಿಲ್ಲ. ಇದಕ್ಕೆ ಕಾರಣವೇನೆಂದರೆ ಭಾರತ ಸಂವಿಧಾನದಲ್ಲಿ ಪ್ರತ್ಯೇಕವಾಗಿ "ಪತ್ರಿಕಾ ಸ್ವಾತಂತ್ರ್ಯ"ವನ್ನು ಕುರಿತು ಎಲ್ಲೂ ಉಲ್ಲೇಖವಾಗಿಲ್ಲ.

ಯಾವ ರಾಷ್ಟ್ರ ಸ್ವಾತಂತ್ರ್ಯಗೊಂಡಿದ್ದು "ರಾಜಕೀಯ ಸ್ವಾತಂತ್ರ್ಯ" ಕುರಿತು ಹೇಳುತ್ತದೆಯೋ ಆ ರಾಷ್ಟ್ರದಲ್ಲಿ ರಾಜಕೀಯ ಸ್ವಾತಂತ್ರ್ಯದ ಬೆಳವಣಿಗೆಗೆ "ಪತ್ರಿಕಾ ಸ್ವಾತಂತ್ರ್ಯವು" ಅತ್ಯಗತ್ಯವಾಗಿರುತ್ತದೆ. ಮಾತ್ರವಲ್ಲ ಆ ರಾಷ್ಟ್ರದಲ್ಲಿಯ ಪ್ರಜಾಪ್ರಭುತ್ವವು ಸಮರ್ಪಕವಾಗಿ ಕಾರ್ಯನಿರ್ವಹಿಸುವುದಕ್ಕೂ ಪತ್ರಿಕಾ ಸ್ವಾತಂತ್ರ್ಯವು ಸಹಕಾರಿಯಾಗುತ್ತದೆ.

ಓದುಗರು ಈಗಾಗಲೇ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವೆಂದರೆ, ವ್ಯಕ್ತಿ ಮತ್ತು ವ್ಯಕ್ತಿಗಳ ನಡುವೆ ವಿಚಾರ ವಿನಿಮಯಮಾಡಿಕೊಳ್ಳುವುದಕ್ಕೆ ಸಹಕಾರಿಯಾಗಬಹುದಾದ ಎಲ್ಲಾ ಬಗೆಯ ಸಂಪರ್ಕ ಮಾಧ್ಯಮಗಳು ಒಳಗೊಂಡಿರುತ್ತದೆ, ಎಂಬುದನ್ನು ಗುರುತಿಸಿಕೊಂಡಿರಬೇಕೆಂದು ಕಾಣುತ್ತದೆ. ಮಾತ್ರವಲ್ಲ 'ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ'ದ ವ್ಯಾಪಕತೆ, ಅಗಾದತೆ ಹಾಗೂ ವೈಶಾಲ್ಯದ ಅರಿವು ಓದುಗರಿಗೆ ವುಂಟಾಗಿರಬಹುದು. ಈ ಬಗೆಯ 'ಸ್ವಾತಂತ್ರ್ಯ'ದ ಮೇಲೆ ನಿರ್ಬಂಧ ತರಲು ಸಾಧ್ಯವಿಲ್ಲವೇ ಎಂಬ ಅನುಮಾನ ಯಾರಿಗಾದರೂ ಬರಬಹುದು.

"ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ"ದ ಮೇಲೆ ನಿರ್ಬಂಧವನ್ನು ತರಬಹುದು. ಸಾರ್ವಜನಿಕ ವ್ಯವಸ್ಥೆಯ ಹಿತ ದೃಷ್ಟಿಯಿಂದ, ಸಾರ್ವಜನಿಕ

### ಸಾರ್ವತ್ರಿಕ ಪ್ರತಿಭಟನೆ

ಈ ಕರಾಳ ವಿಧೇಯಕದ ವಿರುದ್ಧ ಎಲ್ಲೆಲ್ಲೂ ಪ್ರತಿಭಟನೆಯ ಸೊಲ್ಲು ಕೇಳಿ ಬರುತ್ತಿದೆ. ಸಂಸತ್ತಿನ ಉಭಯ ಸದನಗಳಲ್ಲೂ ವಿರೋಧ ಪಕ್ಷದ ಸದಸ್ಯರು ಬಿಹಾರಿನ ಪತ್ರಿಕಾ ವಿಧೇಯಕದ ವಿರುದ್ಧ ಪ್ರತಿಭಟನೆ ಸಲ್ಲಿಸಿ ಸಭಾತ್ಯಾಗ ಮಾಡಿದ್ದಾರೆ.

ಬಿಹಾರದ ರಾಜಧಾನಿ ಪಟ್ನಾದಲ್ಲಿ ಆಗಸ್ಟ್ 2 ರಂದು ಸುಮಾರು 200 ಪತ್ರಕರ್ತರು ವಿಧೇಯಕ ಪ್ರತಿಭಟಿಸಿ ಮೌನ ಮೆರವಣಿಗೆ ನಡೆಸಿದ್ದಾರೆ. ಈ ಮೌನ ಮೆರವಣಿಗೆಯ ಮೇಲೂ ಸಿ. ಆರ್. ಪಿ. ಪೋಲಿಸರು ಲಾಠೀ ಪ್ರಹಾರ ನಡೆಸಿದ ವರದಿಯಾಗಿದೆ.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವು 17–8–82 ರಂದು ಬೆಂಗಳೂರಿನಲ್ಲಿ ಮೌನ ಮೆರವಣಿಗೆ ನಡೆಸಿ ತಮ್ಮ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ. ಸಂಘದ ಅಧ್ಯಕ್ಷ ಶ್ರೀ ಎಸ್ ಜಿ. ಮೈಸೂರು ಮಠ ಮತ್ತು ಕನ್ನಡಪ್ರಭ ದೈನಿಕದ ಸಂಪಾದಕ ಶ್ರೀ ಖಾದ್ರಿ ಶಾಮಣ್ಣನವರ ನೇತೃತ್ವದಲ್ಲಿ ನಿಯೋಗ ರಾಜ್ಯಪಾಲರಲ್ಲಿ ತೆರಳಿ ಮನವಿ ಸಲ್ಲಿಸಿದೆ. ವಿಧೇಯಕವನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂದು ಮನವಿ ಪತ್ರದಲ್ಲಿ ಆಗ್ರಹಪಡಿಸಲಾಗಿದೆ.

ಭದ್ರತೆಯ ಹಿತದೃಷ್ಟಿಯಿಂದ, ಸರ್ಕಾರವು ನಿರ್ಬಂಧವನ್ನು ತರಬಹುದು. ಈ ಸ್ವಾತಂತ್ರ್ಯದ ಮೇಲೆ ಸರ್ಕಾರವು ತರಬಹುದಾದ ನಿರ್ಬಂಧವು ನಿರಂಕುಶವಾಗಿರಬಾರದು, ಅತಿಯಾಗಿರಬಾರದು. ಅದೇನಿದ್ದರು, ಸಂಮಂಜಸವಾದ ನಿರ್ಭಂಧವಾಗಿರಬೇಕು, ಸಕಾರಣವಾದ ನಿರ್ಬಂಧವಾಗಿರಬೇಕು. ವ್ಯಕ್ತಿಯ ಅಭಿವ್ಯಕ್ತಿ ಮತ್ತು ಪ್ರಕಟಣೆಯ ನಿರ್ಬಂಧವೆಂದರೇನು, ಎಂಬುದನ್ನು ಇಲ್ಲಿ ನೋಡಬಹುದು.

### ಸಕಾರಣ ನಿರ್ಬಂಧ:

ವ್ಯಕ್ತಿಯ ವಾಕ್ ಮತ್ತು ಅಭಿವ್ಯಕ್ತ ಸ್ವಾತಂತ್ರ್ಯದ ಮೇಲೆ ತರಬಹುದಾದ ನಿರ್ಬಂಧವು ಸಕಾರಣವಾಗಿರಬೇಕು, ಸಮಂಜಸವಾಗಿರಬೇಕು, ಎಂದು

# ಪತ್ರಿಕಾ ಸ್ವಾತಂತ್ರ್ಯ

**ಬೆ. ಕಾ. ಮೂರ್ತೀಶ್ವರಯ್ಯ**

ಸ್ವಾತಂತ್ರ್ಯದ ಮೇಲೆ ಸರ್ಕಾರವು ತರಬಹುದಾದ ನಿರ್ಬಂಧವು ಸಮಂಜಸವಾದ, ಸಕಾರಣವಾದ ನಿರ್ಬಂಧವಾಗಿರಬೇಕೆಂದು ಹೇಳಿದೆಯಾದರೂ, ಸಮಂಜಸವಾದ, ಸಕಾರಣವಾದ ನಿರ್ಬಂಧವೆಂದರೇನು ? ಎಂಬುವುದನ್ನು ಸಂವಿಧಾನವು ಎಲ್ಲೂ ಉಲ್ಲೇಖಿಸದೇ ಇರುವುದರಿಂದ ಈ ವಿಷಯದ ಮೇಲೆ ನಾವು ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯಕ್ಕೆ ಮೊರೆಹೋಗಬೇಕಾಗುತ್ತದೆ.

'ಸಾರ್ವಜನಿಕ ವ್ಯವಸ್ಥೆ' ಎಂಬ ಪದವು ಸಾರ್ವಜನಿಕ ಶಾಂತಿ, ಸಮಾದಾನ, ಭದ್ರತೆ, ಎಂಬ ಅರ್ಥ ಬರುವ ರೀತಿಯಲ್ಲಿ ಉಪಯೋಗಿಸಲ್ಪಟ್ಟಿದೆ. ಕಿಶೋರ್ ಮೋಹನ್ ವಿರುದ್ಧ ಪಶ್ಚಿಮ ಬಂಗಾಳ ರಾಜ್ಯ ಎಂಬ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು "ಸಾರ್ವಜನಿಕ ವ್ಯವಸ್ಥೆ" ಎಂದರೆ ಏನು ಎಂಬುದನ್ನು ಮೂರು ಭಾಗಗಳಾಗಿ ಕಾನೂನು ಮತ್ತು ವ್ಯವಸ್ಥೆ; ಸಾರ್ವಜನಿಕ ವ್ಯವಸ್ಥೆ, ರಾಷ್ಟ್ರದ ಭದ್ರತೆ ಎಂಬುದಾಗಿ ವಿಂಗಡಿಸಿದೆ. ಕಾನೂನಿಗೆ ಒಳಪಡುವ ಪ್ರತಿಯೊಂದು ಕಾನೂನಿನ ಹೊಸ ಭಾಗವು ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತದೆ. ಆದರೆ ಸಾರ್ವಜನಿಕ ವ್ಯವಸ್ಥೆಯ ಮೇಲೆ ಬೀರದೇ ಹೋಗಬಹುದು. ಹಾಗೆಯೇ ಸಮಾಜದಲ್ಲಿನ ಯಾವುದಾದದರು ಒಂದು ಕಾರ್ಯ ಸಾರ್ವಜನಿಕ ವ್ಯವಸ್ಥೆಯ ಮೇಲೆ ಪರಿಣಾಮ ಬೀರಬಹುದು. ಆದರೆ ಅದೇ ಕಾರ್ಯ ರಾಷ್ಟ್ರೀಯ ಭದ್ರತೆಯ ಮೇಲೆ ಯಾವುದೇ ಪರಿಣಾಮವನ್ನು ಬೀರದೇ ಹೋಗಬಹುದು. ಮತ್ತೆ ಒಂದು ಕಾರ್ಯ ಸಾರ್ವಜನಿಕ ವ್ಯವಸ್ಥೆ ಮತ್ತು ರಾಷ್ಟ್ರೀಯ ಭದ್ರತೆಯ ಮೇಲೆಯೂ ಪರಿಣಾಮವನ್ನು ಉಂಟುಮಾಡಲೂ ಬಹುದು.

ವಾಕ್ ಮತ್ತು ಅಭಿವ್ಯಕ್ತ ಸ್ವಾತಂತ್ರ್ಯದ ಮೇಲೆ ಸರಕಾರ, ಸಾರ್ವಜನಿಕ ವ್ಯವಸ್ಥೆಯ ಹಿತದೃಷ್ಟಿಯಿಂದ ಸಮಂಜಸವಾದ ಅಥವಾ ಸಕಾರಣವಾದ ನಿರ್ಬಂಧವನ್ನು ತರಬಹುದು ಎಂದು ಸಂವಿಧಾನದಲ್ಲಿ ಹೇಳಿರುತ್ತದೆ. ಸಾರ್ವಜನಿಕ ವ್ಯವಸ್ಥೆ ಎಂದರೇನು ? ಎಂಬುದನ್ನು ಮೇಲಿನ ವಿವರಗಳನ್ನು ತಿಳಿದುಕೊಂಡ ಮೇಲೆ ಸಮಂಜಸವಾದ ನಿರ್ಬಂಧ ಅಥವಾ ಸಕಾರಣವಾದ

ಸಂವಿಧಾನ ಹೇಳಿದೆಯಾದರು ಇವುಗಳನ್ನು ಕುರಿತು ಸಂವಿಧಾನದಲ್ಲಿ ನಿರ್ದಿಷ್ಟವಾಗಿಯಾಗಲಿ ಅಥವಾ ಸಂಪೂರ್ಣವಾಗಿಯಾಗಲಿ ಎಲ್ಲೂ ವಿಶ್ಲೇಷಣೆ ಮಾಡಿರುವುದಿಲ್ಲ. ಪ್ರತಿಯೊಂದು ವಿಷಯದಲ್ಲೂ ಅದರದೇ ಆದ ಹಿನ್ನೆಲೆಯಲ್ಲಿ ಅದಕ್ಕೆ ಸಂಬಂಧಿಸಿದಂತೆ ಸಕಾರಣವಾದ ಮತ್ತು ಸಮಂಜಸವಾದ ನಿರ್ಬಂಧ ಯಾವುದು ಎನ್ನುವುದನ್ನು ತೀರ್ಮಾನಿಸಬೇಕಾಗಿದೆ.

ಸಂವಿದಾನದ 19(6)ರ ವಿಧಿಯಲ್ಲಿ ಹೇಳಿರುವಂತೆ ವ್ಯಕ್ತಿ ಅನುಭವಿಸಬಹುದಾದ ಮೂಲಭೂತ ಹಕ್ಕು ಎನ್ನುವುದು ಮೇಲೆ ತರಬಹುದಾದ ನಿರ್ಬಂಧವು ಸೀಮಿತವಾದರು ಕೂಡ; ನಿರಂಕುಶವಾಗಿರಬಾರದು ಅಥವಾ ಅತಿಯಾಗಿರಬಾರದು ಎಂದು ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. ಸಾರ್ವಜನಿಕ ಹಿತದೃಷ್ಟಿಯಿಂದ ಎಷ್ಟು ಬೇಕೋ ಅಷ್ಟು ಮಾತ್ರ ವ್ಯಕ್ತಿಯ ಮೂಲಭೂತ ಹಕ್ಕುಗಳ ಮೇಲೆ ನಿರ್ಬಂಧವನ್ನು ವಿಧಿಸಬಹುದು. ಎಂಬುದು ಇದರ ಅರ್ಥ.

### ಅಮೇರಿಕಾ ಸಂವಿಧಾನ:

ಅಮೇರಿಕಾದ ಸಂವಿಧಾನದಂತೆ ನಮ್ಮ ಸಂವಿಧಾನದಲ್ಲಿ 19(1)(a) ವಿಧಿಯು ಪ್ರತ್ಯೇಕವಾಗಿ "ಪತ್ರಿಕಾ ಸ್ವಾತಂತ್ರ್ಯ"ವನ್ನು ಕುರಿತು ಏನು ಹೇಳಿಲ್ಲವಾದರು ಈ ವಿಧಿಯಲ್ಲಿ ನಮೂದಾಗಿರುವ ಮೂಲಭೂತ ಹಕ್ಕುಗಳಲ್ಲಿ ಒಂದಾದ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದಲ್ಲಿಯೇ ಈ ಪತ್ರಿಕಾ ಸ್ವಾತಂತ್ರ್ಯವು ಒಳಗೊಂಡಿರುತ್ತದೆ, ಎಂದು ಭಾವಿಸಬೇಕಾಗಿದೆ.

ಲಾರ್ಡ್ ವ್ಯಾನ್ಸ್ ಫೀಲ್ಡ್‌ರವರು "ಪತ್ರಿಕಾ ಸ್ವಾತಂತ್ರ್ಯ"ವನ್ನು ಕುರಿತು ಬರೆಯುತ್ತಾ "ಯಾವುದೇ ರೀತಿಯಲ್ಲಿ ಪೂರ್ವಭಾವಿಯಾಗಿ ಅರ್ಹತಾ ಪತ್ರವನ್ನು ಪಡೆಯದೇ ಲಿಖಿತ ಬರವಣಿಗೆಯೊಂದನ್ನು ಪ್ರಕಟಣೆಯಲ್ಲಿ ತರುವುದಾಗಿದ್ದು ಆ ಪ್ರಕಟಣೆಯು ಕಾನೂನಿನ ರಕ್ಷಣೆಗೆ ಒಳಪಡುತ್ತದೆ." ಎಂದು ತಿಳಿಸಿರುತ್ತದೆ.

ಇದರಿಂದ ನಮಗೆ ತಿಳಿದು ಬರುವುದೇನೆಂದರೆ "ಪತ್ರಿಕಾ ಸ್ವಾತಂತ್ರ್ಯ"ವೆಂದರೇ ಒಬ್ಬ ವ್ಯಕ್ತಿ ತನಗೆ ಸರಿ ಎನಿಸಿದ ತನ್ನ ಅಭಿಪ್ರಾಯವನ್ನು ನಿರ್ಣಯವನ್ನು ಉದ್ದೇಶವನ್ನು ಯಾವುದೇ ರೀತಿಯಲ್ಲಿ ಪೂರ್ವಭಾವಿಯಾಗಿ ಅಪ್ಪಣೆ ಪಡೆಯದೇ ಮುದ್ರಿಸಿ ಪ್ರಕಟಿಸುವ ಹಕ್ಕಾಗಿರುತ್ತದೆ, ಎಂದು ಹೇಳಬಹುದು. ಇದರ ಪ್ರಕಾರ ಪತ್ರಿಕಾ ಸ್ವಾತಂತ್ರ್ಯವು ಪತ್ರಿಕೆಗಳಿಗೂ ಮತ್ತು ಸಾಪ್ತಾಹಿಕಗಳಿಗೂ ಮಾತ್ರ ಅನ್ವಯವಾಗುವಂತಹದು ಎಂದು ಭಾವಿಸಬಾರದು. ಈ ಬಗೆಯ "ಪ್ರಕಟಿಸುವ ಸ್ವಾತಂತ್ರ್ಯ" ಎಲ್ಲಾ ರೀತಿಯ ಕರಪತ್ರಗಳಿಗೂ; ಸುತ್ತೋಲೆಗಳಿಗೂ ಮತ್ತು ಎಲ್ಲಾ ಬಗೆಯ ಪ್ರಕಟಣೆಗಳಿಗೂ ಮತ್ತು ವ್ಯಕ್ತಿಯಿಂದ ವ್ಯಕ್ತಿಗೆ ವಿಚಾರ ವಿನಿಯಮ ಮಾಡಿಕೊಳ್ಳಲು ಸಹಕಾರಿಯಾಗುವ ಎಲ್ಲಾ ಬಗೆಯ ಸಂಪರ್ಕ ಮಾಧ್ಯಮಗಳಿಗೂ ಅನ್ವಯವಾಗುತ್ತದೆ.

### ಪ್ರಜಾಪ್ರಭುತ್ವದಲ್ಲಿ ಪತ್ರಿಕೆಗಳ ಪಾತ್ರ:

ಭಾರತವು ಪ್ರಜಾಪ್ರಭುತ್ವ ರಾಷ್ಟ್ರ. ಪ್ರಜಾಪ್ರಭುತ್ವ, ರಾಷ್ಟ್ರದ ಆಡಳಿತ ಪದ್ಧತಿಯಷ್ಟೆ ಅಲ್ಲ ಅದೊಂದು ಬಗೆಯ ಸಮಾಜದ ಪದ್ಧತಿಯೂ ಹೌದು. ಸ್ವಾತಂತ್ರ್ಯತೆ, ಸಮಾನತೆ, ಸೋದರತೆ ಪ್ರಜಾಪ್ರಭುತ್ವದ ಜೀವಾಳ.

ಹಲವಾರು ಶತಮಾನಗಳ ಹಿಂದೆ ಪ್ರಜಾಪ್ರಭುತ್ವ ಅರಂಭಗೊಂಡ ಕಾಲದಲ್ಲಿ ರಾಷ್ಟ್ರದ ಪ್ರತಿಯೊಬ್ಬ ಪ್ರಜೆಯು ಸರಕಾರದ ಆಡಳಿತದಲ್ಲಿ ಭಾಗವಹಿಸುತ್ತಿದ್ದರು. ಅದನ್ನು ಸರಳ ಅಥವಾ ಪ್ರತ್ಯಕ್ಷ ಪ್ರಜಾಪ್ರಭುತ್ವ ಎಂದರು. ಆಧುನಿಕ ಯುಗದಲ್ಲಿ ರಾಜ್ಯಗಳ ವಿಸ್ತರಣೆಯಿಂದ ಜನ ಸಂಖ್ಯೆಯ ಬಾಹುಳ್ಯತೆಯಿಂದ ರಾಷ್ಟ್ರದ ಪ್ರಜೆಗಳು ಒಂದು ಕಡೆ ಸೇರಿ ರಾಜ್ಯ ಆಡಳಿತವನ್ನು ನಡೆಸಲು ಸಾಧ್ಯವಿರುವುದಿಲ್ಲ. ಈ ರೀತಿ ದೇಶದ ಆಡಳಿತದಲ್ಲಿ "ಪ್ರಭು"ಗಳಾದ "ಪ್ರಜೆ"ಗಳು ಪ್ರತ್ಯಕ್ಷವಾಗಿ ಭಾಗವಹಿಸಲು ಸಾಧ್ಯವಿಲ್ಲದೆ ಇರುವುದರಿಂದ ಕಾಲಕಾಲಕ್ಕೆ ಚುನಾವಣೆಗಳನ್ನು ನಡೆಸಿ ಆ ಮೂಲಕ ಪ್ರತಿನಿಧಿಗಳನ್ನು ಚುನಾಯಿಸಿ ರಾಜ್ಯದ ಅಧಿಕಾರವನ್ನು ಪ್ರಜಾಪ್ರತಿನಿಧಿಗಳ ಕೈಗೆ ಕೊಡುತ್ತಾರೆ. ಪ್ರಜಾಪ್ರತಿನಿಧಿಗಳು ಪ್ರಜೆಗಳ ಪರವಾಗಿ ಅವರಿಗಿತ್ತಿರುವಅಧಿಕಾರವನ್ನು ಅಧಿಕಾರ ಕಾಲದವರೆಗೆ ಚಲಾಯಿಸುತ್ತಾರೆ. ಇದನ್ನು ಪ್ರತಿನಿಧಿ ಪ್ರಜಾಪ್ರಭುತ್ವ ಎಂದು ಕರೆಯಲಾಗಿದೆ.

ಸರಕಾರದ ಅಧಿಕಾರದ ಆಡಳಿತ ಸೂತ್ರಗಳನ್ನು ಕೈಗೆ ತೆಗೆದುಕೊಳ್ಳುವ ಪ್ರತಿನಿಧಿಗಳು ಯಾವ ರೀತಿಯ ವ್ಯಕ್ತಿಗಳಾಗಿರುತ್ತಾರೆ ಎಂದು ಹೇಳಲು ಬರುವುದಿಲ್ಲ. ಅವರು ಒಳ್ಳೆಯವರಾಗಿರಬಹುದು ಅಥವಾ ಕೆಟ್ಟವರಾಗಿರಬಹುದು. ಜನತೆಗೆ ಸಂವಿಧಾನ ನೀಡಿರುವ ಮೂಲಭೂತ ಹಕ್ಕುಗಳ ಮುಂದುವರೆಯುವುದಕ್ಕೆ ಸಮ್ಮತಿಸಬಹುದು. ಅಥವಾ ಕಸಿದುಕೊಳ್ಳಲು ಪ್ರಯತ್ನಿಸಬಹುದು ಅಥವಾ ಹಕ್ಕುಗಳನ್ನು ರದ್ದುಗೊಳಿಸಬಹುದು ಅಥವಾ "ಸಾರ್ವಜನಿಕ ಭದ್ರತೆ"ಯೆಂದು ಹೇಳಿಕೊಂಡು ಕೆಲವು ನಿರ್ದಿಷ್ಟ ವ್ಯಕ್ತಿಗಳಿಗೆ ಈ ಸ್ವಾತಂತ್ರ್ಯಗಳನ್ನು ರದ್ದುಗೊಳಿಸಿ ಆಜ್ಞಾಪರಿಪತ್ರವೊಂದನ್ನು ಹೊರಡಿಸಿ ಅದನ್ನು ಸಂಬಂಧಿಸಿದ ಇಲಾಖೆಗಳಿಗೆ ಕಳಿಸಬಹುದು. ಆಗ ಜನತೆ ಅನುಸರಿಸಬೇಕಾದ ಮಾರ್ಗಗಳು ಯಾವುದು ಎಂಬುದನ್ನು ನೋಡಬೇಕಾಗುತ್ತದೆ.

ಮೇಲೆ ವಿವರಿಸಿದ ಸಂದರ್ಭಗಳಲ್ಲಿ ಸರಕಾರವಾಗಲಿ ಅಥವಾ ಸರಕಾರದಿಂದ ನಿಯಮಿಸಲ್ಪಟ್ಟ ಅಧಿಕಾರಿಯಿಂದಾಗಲಿ ವ್ಯಕ್ತಿಯ ಮೂಲಭೂತ ಹಕ್ಕುಗಳನ್ನು ಶಾಶ್ವತವಾಗಿ ಅಥವಾ ತಾತ್ಕಾಲಿಕವಾಗಿ ರದ್ದುಗೊಳಿಸಿದಾಗ ಅಥವಾ ನಿರ್ದಿಷ್ಟ ವ್ಯಕ್ತಿಗಳಿಗೆ ಈ ಹಕ್ಕುಗಳನ್ನು ರದ್ದುಗೊಳಿಸಿದ ಸಂದರ್ಭದಲ್ಲಿ ಜನರು ಪತ್ರಿಕೆಗಳ ಮೂಲಕ ವಿಚಾರ ಸಂಕಿರ್ಣಗಳ ಮೂಲಕ ಬಹಿರಂಗ ಸಭೆಗಳ ಮೂಲಕ ಈ ವಿಷಯವನ್ನು ಕುರಿತು ಚರ್ಚಿಸಿ ಸರಕಾರವನ್ನು ಸರಿಯಾದ ಮಾರ್ಗಕ್ಕೆ ತರಬಹುದು.

ಆದುದರಿಂದ ಪ್ರಜಾಪ್ರಭುತ್ವದಲ್ಲಿ ಪತ್ರಿಕೆಗಳ ಪಾತ್ರ ಮಹತ್ವದ್ದಾಗಿರುತ್ತದೆ. ಪತ್ರಕರ್ತನು ತನ್ನನ್ನು ಮಾರಿಕೊಳ್ಳದೆ ಇದ್ದರೆ–ಪ್ರಜೆಗಳ ಪ್ರತಿನಿಧಿಯಾಗಿರುತ್ತಾನೆ. ಪ್ರಾಮಾಣಿಕ ಪತ್ರಕರ್ತನು ತನ್ನ ಸಮಕಾಲೀನ ಜನತೆಯ "ಆಶೋತ್ತರಗಳನ್ನು" ತನ್ನ ಅಭಿವ್ಯಕ್ತಿಗೆ ಮಾಧ್ಯಮವನ್ನಾಗಿಸಿಕೊಂಡಿರುವ ಪತ್ರಿಕೆಯ ಮೂಲಕ ಪ್ರತಿಬಿಂಬಿಸುತ್ತಾನೆ. ಇದು ಅವನ ಧರ್ಮ.

ಈ ಮೇಲಿನ ಮಸೂದೆ ಈಗ ಬಿಹಾರ್ ರಾಜ್ಯಕ್ಕೆ ಮಾತ್ರ ಅನ್ವಯಿಸುತ್ತದೆ ಎಂದು ಆ ಮಸೂದೆ ಹೇಳುತ್ತದೆ. ಇಂಥದ್ದೆ ಒಂದು ಮಸೂದೆ ಈಗ ಮದರಾಸಿನಲ್ಲಿರುತ್ತದೆ. ಎಲ್ಲಾ ರಾಜ್ಯಗಳಲ್ಲೂ ಆಯಾ ರಾಜ್ಯ ಭಾಷೆಗಳಲ್ಲಿ ಪತ್ರಿಕೆಗಳಿರುವುದರಿಂದ ಅಲ್ಲಿನ ರಾಜಕಾರಣಿ ನಡೆಸುವ ಭ್ರಷ್ಟಾಚಾರ ಸ್ವಜನ ಪಕ್ಷಪಾತ ಲಂಚಗುಳಿತನ ಮೊದಲಾದವನ್ನು ರಾಷ್ಟ್ರದ ಹಿತದೃಷ್ಟಿಯಿಂದ; ಪ್ರಜಾಪ್ರಭುತ್ವ ಹಿತದೃಷ್ಟಿಯಿಂದ ಜನತೆಯ ಹಿತದೃಷ್ಟಿಯಿಂದ ಬಹಿರಂಗಪಡಿಸಬೇಕಾದದ್ದು ಅನಿವಾರ್ಯ ಮತ್ತು ಕರ್ತವ್ಯ. ಹೀಗೆ ಸೀಮಿತ ಕಾಲಕ್ಕೆ ಅಧಿಕಾರಿಯಾಗಿ ರಾಜಕಾರಣಿಯಾಗಿ ಮೆರೆಯುವ ವ್ಯಕ್ತಿಗಳ ವಿದ್ಯಮಾನಗಳನ್ನು ಪತ್ರಿಕೆಗಳಲ್ಲಿ ಬಹಿರಂಗಪಡಿಸಬೇಕಾದುದು ಅನಿವಾರ್ಯವಾದುದರಿಂದ ಪತ್ರಿಕೆಗಳು ಮೇಲೆ ನಿರ್ಬಂಧವನ್ನು ತರುವಂತ ಮಸೂದೆಗಳು ರಾಜ್ಯಗಳಲ್ಲಿ ಇನ್ನೂ ಮುಂದೆ ಕಾಣಿಸಿಕೊಳ್ಳಬಹುದು. ಇಂಥ ಮಸೂದೆ ಈಗ ಬಿಹಾರ್‌ನಲ್ಲಿ ಬಂದಿದೆ. ಮದರಾಸಿನಲ್ಲಿದೆ. ಇಂತಹದೇ ಮಸೂದೆ ನಮ್ಮ ಕರ್ನಾಟಕದಲ್ಲಿ ಬರುವುದಿಲ್ಲವೆಂದು ಹೇಳಲು ಯಾವುದೇ ಭರವಸೆಗಳಿಲ್ಲ.

ಪ್ರಜಾಪ್ರಭುತ್ವ ಪ್ರೇಮಿಗಳು, ಪತ್ರಿಕಾ ಸ್ವಾತಂತ್ರ್ಯದ ಪ್ರತಿಪಾದಕರು ಈ ನಿರಂಕುಶ ಮಸೂದೆಯ ವಿರುದ್ಧ ಸಿಡಿದೇಳುವುದು ಅತ್ಯಗತ್ಯ.

○

## ಸಿ.ಐ.ಟಿ.ಯು.ಗೆ ಸೇರಿರುವ ಮತ್ತು ಸೇರಲಿರುವ ಕಾರ್ಮಿಕ ಸಂಘಗಳ ಅವಗಾಹನೆಗೆ

ಅಮೇರಿಕಾದ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷ ರೀಗನ್‌ರವರ ಧೋರಣೆಯಿಂದಾಗಿ ಪ್ರಪಂಚದಲ್ಲಿ ಇಂದು ಯುದ್ಧದ–ಅಣುಯುದ್ಧದ ಅಪಾಯವು ಹೆಚ್ಚುತ್ತಿದೆ. ಕಳೆದ ಡಿಸೆಂಬರ್‌ನಲ್ಲಿ ಕ್ಯೂಬಾದ ರಾಜಧಾನಿ ಹವಾನಾದಲ್ಲಿ ನಡೆದ ವರ್ಲ್ಡ್ ಫೆಡರೇಷನ್ ಆಫ್ ಟ್ರೇಡ್ ಯೂನಿಯನ್ಸ್ ಜಾಗತಿಕ ಸಮ್ಮೇಳನವು 1982ರ ಸೆಪ್ಟೆಂಬರ್ 1 ರಂದು 'ಶಾಂತಿ ಮತ್ತು ಸೌಹಾರ್ದತಾ' ದಿನವನ್ನು ಆಚರಿಸಬೇಕೆಂದು ಪ್ರಪಂಚದ ಕಾರ್ಮಿಕ ವರ್ಗಕ್ಕೆ ಕರೆ ಕೊಟ್ಟಿದೆ.

ಕಳೆದ ಜುಲೈ 23 ರಿಂದ 25 ರ ವರೆಗೆ ಬೆಂಗಳೂರಿನಲ್ಲಿ ನಡೆದ ಸಿ.ಐ.ಟಿ.ಯು. ಕಾರ್ಯಕಾರಿ ಸಮಿತಿಯು ಸೆಪ್ಟೆಂಬರ್ 1 ರಂದು ಸಿ.ಐ.ಟಿ.ಯು.ಗೆ ಸೇರಿರುವ ಎಲ್ಲಾ ಕಾರ್ಮಿಕ ಸಂಘಗಳೂ ದೇಶಾದ್ಯಂತ ಶಾಂತಿ ಮತ್ತು ಸೌಹಾರ್ದತಾ ದಿನವನ್ನು ಆಚರಿಸಬೇಕೆಂದು ಕರೆ ಕೊಟ್ಟಿದೆ. ಅಂದು ನಮ್ಮ ಸಂಘಗಳು ಯುದ್ಧದ ಅಪಾಯದ ಬಗ್ಗೆ ಕರಪತ್ರಗಳನ್ನು ಪ್ರಕಟಿಸಿ, ಮೆರವಣಿಗೆ, ಬಹಿರಂಗ ಸಭೆಗಳನ್ನು ನಡೆಸಿ ಯುದ್ಧ ವಿರೋಧಿ ದಿನವನ್ನು ಆಚರಿಸಬೇಕು. ನಮ್ಮ ನಿಲುವಿಗೆ ಒಪ್ಪಿದ ಇತರೆ ಎಲ್ಲಾ ಕಾರ್ಮಿಕ ಸಂಘಗಳನ್ನು ಸಂಪರ್ಕಿಸಿ ಜಂಟಿಯಾಗಿ ಈ ದಿನವನ್ನು ಆಚರಿಸಬೇಕು. ಜಂಟಿ ಕಾರ್ಯಕ್ರಮವು ಸಾಧ್ಯವಾಗದಿದ್ದ ಪಕ್ಷದಲ್ಲಿ ನಮ್ಮ ಸಂಘಗಳೇ ಈ ದಿನವನ್ನು ಆಚರಿಸಬೇಕಾಗಿ ವಿನಂತಿ.

ಸಿ. ನಂಜುಂಡಪ್ಪ
ಪ್ರಧಾನ ಕಾರ್ಯದರ್ಶಿ
ಸಿ.ಐ.ಟಿ.ಯು. ರಾಜ್ಯ ಸಮಿತಿ

# ನೆರೆ ಅನಾಹುತವನ್ನು ತಡೆಗಟ್ಟಬಾರದೇಕೆ ?

—ಯು. ಪಿ. ಡಿಸೋಜಾ

ಭಾರತಕ್ಕೆ 1947 ಆಗಸ್ಟ್ 15ಕ್ಕೆ ಸ್ವಾತಂತ್ರ್ಯ ದೊರೆತು ಇದೀಗ 35 ವರ್ಷಗಳಾದುವು. ಈ ಅರ್ಧ ಶತಮಾನ ಸಮೀಪಿಸುತ್ತಿರುವ ದೀರ್ಘಾವಧಿ ಸಮಯದ ತನಕ ನಮ್ಮ ದೇಶದ ವಿವಿಧ ಸಮಸ್ಯೆಗಳ ಪೈಕಿ, ದೇಶವ್ಯಾಪಿಯಾಗಿ ವರ್ಷ ವರ್ಷ ಕಾಡುತ್ತಿರುವ ನೆರೆಯಿಂದಾಗಿ ಅನಾಹುತವಾಗುವ ಭೀಕರ ಸಮಸ್ಯೆಯನ್ನು ನಿವಾರಿಸುವರೇ? ದೇಶವನ್ನು ಆಳುವವರು ಮಾಡಿರುವ ಪ್ರಯತ್ನಗಳ ಬಗ್ಗೆ 1982ರಲ್ಲಾದರೂ ನಾವು ಒಂದಿಷ್ಟು ಆಳವಾಗಿ ಯೋಚಿಸಬೇಕಾಗಿದೆ.

ದೇಶ ವ್ಯಾಪಿಯಾಗಿ ಬರುವ ನೆರೆಯ ಅನಾಹುತಕ್ಕೆ ಒಳಗಾಗದ ಪ್ರಾಂತ್ಯಗಳಿಲ್ಲ. ಪ್ರತೀ ವರ್ಷ ನೆರೆಯ ಸಂದರ್ಭದಲ್ಲಿ ನಮ್ಮ ಆಳುವ ಸರಕಾರದಿಂದ ಸಿಗುತ್ತಿರುವ ಆಶಾದಾಯಕ ಸೂಚನೆಗಳೆಂದರೆ :

1. ನೆರೆ ಸಂತ್ರಸ್ತರಿಗೆ ದೋಣಿಗಳ ಏರ್ಪಾಡು ಮಾಡಿರುತ್ತೇವೆ. ಇಂತಿಂಥ ಪ್ರದೇಶಗಳವರಿಗೆ ಇಂತಿಂಥ ಸ್ಥಳಗಳಲ್ಲಿ ಬಿಡಾರ ನಿಲ್ಲಲು ಏರ್ಪಾಡು ಮಾಡಿದ್ದೇವೆ. ಶಾಲೆ, ಕಾಲೇಜು, ಆಶ್ರಮ, ದೈವಸ್ಥಾನ, ಇಗರ್ಜಿ. ಸಮಾಧಾನದ ವಿಚಾರ.

2. ನೆರೆ ಬಂದು ಅನಾಹುತಕ್ಕೊಳಗಾದ ಸಂತ್ರಸ್ತರಿಗೆ ಸಾವಿರಾರು ರೂಪಾಯಿ ಪರಿಹಾರ, ಸಂತ್ರಸ್ತರಿಗಾಗಿ ದೇಶದುದ್ದಕ್ಕೂ ಸಮಿತಿಗಳ ರಚನೆ. ಈ ಸಮಿತಿಗಳಲ್ಲಿ ಮುಖ್ಯವಾಗಿ ಕಾಂಗ್ರೆಸ್ (ಐ) ಕಾರ್ಯಕರ್ತರೂ, ಮುಖಂಡರೂ ಇದ್ದು ಜನಸೇವೆಯ ಮಹದ್ಕಾರ್ಯಗಳ ವರ್ತಮಾನಗಳನ್ನು ನಾವು ಪತ್ರಿಕೆಗಳಲ್ಲಿ ಓದುತ್ತೇವೆ.

3. ನೆರೆ ಸಂತ್ರಸ್ತರಿಗೆ ಸಹಾಯ ಮಾಡಲು ದೇಶವ್ಯಾಪಿಯಾಗಿ ಸಂಗ್ರಹಿಸುವ ಲಕ್ಷಗಟ್ಟಲೆ ರೂಪಾಯಿ. ಈ ಹಣಕ್ಕೆ ಇತಿಮಿತಿಯಿಲ್ಲ. ಇದರೊಟ್ಟಿಗೆ ವಸ್ತ್ರ, ಪಾತ್ರೆ, ಮರ, ಹಂಚು ಮೊದಲಾದವು. ಇದು ಯಾರಿಗೆ ಎಷ್ಟು ಪಾವತಿಯಾಗಿದೆ ಎಂಬ ವಿವರ ಅನಗತ್ಯ.

4. ನೆರೆ ಸಂತ್ರಸ್ತರಿಗೆ ಘನ ಸರಕಾರದಿಂದ ಸಾವಿರಾರು ರೂಪಾಯಿಗಳ ಕೊಡುಗೆ. ಈ ಹಣ ಸಂತ್ರಸ್ತರ ಕೈಗೆ ಸಿಗುವಾಗ ಶೇ. 25% ಅಧಿಕಾರಿಗಳಿಗೆ ದುಡಿದ ಪ್ರತಿಫಲದ ಕೊಡುಗೆ. (1975 ರಲ್ಲಿ ಕೊಟ್ಟ ಹಣಕ್ಕಾಗಿ ಜಪ್ತಿ ನಡೆದಿದೆ.)

5. ನೆರೆ ಸಂತ್ರಸ್ತರಿಗೆ ಸಿಗುವ ಹಣಕ್ಕಾಗಿ ಅವರ ಪರದಾಟ. ಅರ್ಜಿಗಳು ಬರೆಯಲು ಹಣ, ಪ್ರಯಾಣ ಖರ್ಚು, ಸರಕಾರೀ ಆಫೀಸುಗಳಿಗೆ ಹೋದ ಕೂಡಲೇ ಮಾನ್ಸೂಲಿನಂತೆ ಗೋಡೆ, ಕಂಬಗಳ ಕೂತುಗಳಿಗೂ, ಇನ್ನಿತರ ಮಾನವ ದೈವಗಳಿಗೂ ಹರಕೆ. ರೋಗಪೀಡಿತರು ದೈವಗಳಿಗೆ ರೋಗ ಗುಣವಾದ ಮೇಲೆ ಹರಕೆ ಕೊಡುವ ಕ್ರಮವಾದರೆ, ಈ ಮಾನವ ದೈವಗಳಿಗೆ ಮೊದಲೇ ಹರಕೆ ಕೊಡಬೇಕು ರೋಗ ಗುಣವಾಗುತ್ತದೆ ಎಂದು ತಿಳಿದ ಕೂಡಲೇ ಹೆಚ್ಚಿನ ಹರಕೆಗಾಗಿ ಬೇಡಿಕೆ. ಇದು ಕೊಡದಿದ್ದರೆ ರೋಗ ಗುಣದ ನಂಬಿಕೆ ಹೇಳಲಿಕ್ಕಾಗುವುದಿಲ್ಲವೆಂದು ಉತ್ತರ.

6. ಸಂತ್ರಸ್ತರು, ಸಿಗುವ ಪ್ರಯೋಜನ ಪಡೆಯಲು ಕೆಲಸ ಕಾರ್ಯಬಿಟ್ಟು ತಿಂಗಳುಗಟ್ಟಲೆ ನಲಿದಾಡಬೇಕು. ನೂರಾರು ರೂಪಾಯಿ ಖರ್ಚು.

ಹೀಗೆ ಕಳೆದ 35 ವರ್ಷಗಳಿಂದ ದೇಶವನ್ನಾಳುವವರು ನೆರೆ ಸಂತ್ರಸ್ತರಿಗಾಗಿ ನಡೆಸಿದ ಪ್ರಯತ್ನವೆಂದರೆ, ಅವರ ಹೆಸರಲ್ಲಿ ವರ್ಷಕ್ಕೊಮ್ಮೆ ಲಕ್ಷಗಟ್ಟಲೆ ರೂಪಾಯಿ ಸಂಗ್ರಹಿಸಿ ನಡೆಸಿದ ಭ್ರಷ್ಟಾಚಾರಕ್ಕೆ ಮಿತಿ ಇಲ್ಲ. ಇದನ್ನು ಸಮರ್ಥಿಸಿಕೊಳ್ಳುವ ವಿಧಾನ ವಿಚಿತ್ರ. "ನಾವು ಬಡವರಿಗಾಗಿ ದೊಡ್ಡ ದೊಡ್ಡ ಯೋಜನೆಗಳನ್ನು ಕೈಕೊಂಡಿದ್ದೇವೆ. ಲಕ್ಷಗಟ್ಟಲೆ ಹಣವನ್ನು ಸಹಾಯ ಮಾಡಿದ್ದೇವೆ. ಜ...ಪೂ...ವಿ...ವ್ಯೊ...ಇ....ಗಂ....ಇವರ ಮುಂದಾಳ್ತನದಲ್ಲಿ ದೃಢ ಸರಕಾರ ರಚಿಸಿ, ಆಡಳಿತೆ ನಡೆಸಿ, ದೇಶದ ಸಮಗ್ರ ಅಭಿವೃದ್ಧಿ ಸಾಧಿಸಿದ್ದೇವೆ. ಗು...ರಾ...ರವರ ಮುಖಂಡತ್ವದಲ್ಲಿ ಪ್ರಾರ್ಥನೆ ನಡೆಸಿ ನೆರೆ ತರಿಸಿದ್ದೇವೆ.ನಮ್ಮನ್ನು ಅಲುಗಾಡಿಸಲು ಈ ದೇಶದಲ್ಲಿ ಯಾರಿಗೂ ಸಾಧ್ಯವಿಲ್ಲ... (ಇದಕ್ಕೆ ಜನರೇ ಉತ್ತರ ಕೊಡುತ್ತಾರೆ.) ಇನ್ನೂ ಮುಂದುವರಿದು, ಇತರರು ದೊಡ್ಡ ದೊಡ್ಡ ರೀತಿಯಲ್ಲಿ ಕದ್ದಿದ್ದಾರೆ. ನಾವು ಕದ್ದದ್ದು ಸಣ್ಣ ವಸ್ತು...ಹೇಗಿದೆ ನ್ಯಾಯ ಪರಿಪಾಲನೆ ಮಾಡುವವರ ಸಮರ್ಥನೆಯ ವಿಧಾನ. ಭ್ರಷ್ಟಾಚಾರವೆಸಗುವುದು ಅನ್ಯಾಯ ಎಂದ್ಹೇಳುವ ಕಾಂಗ್ರೆಸ್ (ಐ) ಮುಖಂಡರು, ಇತರರು ಮಾಡಿದ್ದಕ್ಕೆ ನಾವು ಮಾಡುವುದು.

ಈ ವಿಚಾರಗಳನ್ನೆಲ್ಲ ದೇಶದ, ರಾಜ್ಯದ ವಿಚಾರವಂತರು, ಮನವರಿಗೆ ಮಾಡಿಕೊಳ್ಳಬೇಕಾದ ಕಾಲ ಸನ್ನಿಹಿತವಾಗಿದೆ.

ನೆರೆಯ ಅನಾಹುತ ನಮ್ಮ ದೇಶಕ್ಕೆ ಮಾತ್ರವಲ್ಲ, ಲೋಕದ ಅನೇಕ ದೇಶಗಳಲ್ಲೂ ಇರುವುದನ್ನು ಓದುತ್ತೇವೆ. ನಮ್ಮ ನೆರೆಯ ರಾಷ್ಟ್ರವಾದ ಚೈನಾ ದೇಶದಲ್ಲಿ ನೆರೆಯೆಂಬುದು ಭಯಂಕರ ಪಿಡುಗು ಎಂದ್ಹೇಳುವ ಕಾಲ ಒಂದಿತ್ತು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ ಬಳಿಕ ಚೈನಾ ದೇಶವು ವಿಮೋಚನೆ ಪಡೆದು ಸಮಾಜವಾದಿ ಆಡಳಿತೆ ಜ್ಯಾರಿಯಾಯಿತು. ಈ ದೇಶದ ನೆರೆ ಪಿಡುಗನ್ನು ನಿವಾರಿಸಲು ಅಲ್ಲಿನ ಆಡಳಿತೆಯವರು ಸಾಮರ್ಥ್ಯ ಹೊಂದಿರುವುದನ್ನು ನಮ್ಮ ದೇಶದ ಆಡಳಿತಾ ವರ್ಗ ಮನಗಾಣುವುದು ಅಗತ್ಯ. ಇಂಥಾ ತೀವ್ರ ರೀತಿಯ ಯೋಜನೆಗಳನ್ನು ಸಿದ್ಧಪಡಿಸಲು ನಮ್ಮ ದೇಶದಲ್ಲಿ ಬುದ್ಧಿವಂತ ತಜ್ಞರಿದ್ದಾರೆಯೆಂಬುದು ನಮಗೆ ತಿಳಿಸಿದರೂ ಅವರ ಸಹಾಯ ಪಡೆಯಲು ಮಾತ್ರ ಆಡಳಿತ ವರ್ಗ ತಯಾರಿಲ್ಲ. ಯೋಜನೆಯೊಂದನ್ನು ರೂಪಿಸಬೇಕಾದರೆ ಸಂಬಂಧ ಪಟ್ಟ ಸಮಸ್ಯೆಗಳ ಅಭ್ಯಾಸವಿದ್ದವರನ್ನು ನೇಮಿಸುವ ಬದಲು ಮಂತ್ರಿಗಳ ಆಪ್ತರನ್ನೋ, ಸಂಬಂಧಿಕರನ್ನೋ ಒಳಗೊಂಡಿರುವ ಯೋಜನಾ ಸಮಿತಿಗಳಿಂದ ದೇಶದ ಸಮಸ್ಯೆಗಳು ನಿವಾರಣೆಯಾಗುವುದಾದರೂ ಹೇಗೆ ?

ನಮ್ಮ ದೇಶ ಸ್ವಾತಂತ್ರ್ಯ ಪಡೆದ ಬಳಿಕ ನಾವು ನೆರೆ ಪರಿಹಾರಕ್ಕೆ ವ್ಯಯ ಮಾಡಿದ ಹಣವು ಸ್ವಪ್ರತಿಷ್ಠೆಗಾಗಿ ಮಾತ್ರ ಖರ್ಚಾಗಿದೆ. ಈ ನೆರೆ ಅನಾಹುತವನ್ನು ತಪ್ಪಿಸಲು ಬೇಕಾದ ಯೋಜನೆಗಳು ನಮ್ಮ ಆಡಳಿತೆಯವರಲ್ಲಿಲ್ಲ. ಅವರಿಗೆ ಅದು ಬೇಕಿಲ್ಲವೆಂದೇ ಹೇಳಬೇಕು. ಇಂಥಾ ಯೋಜನೆ ತಯಾರಿಸಿ ಜ್ಯಾರಿಯಾಗಿ ಪ್ರಗತಿ ಹೊಂದಿದರೆ ವರ್ಷ ವರ್ಷ ಇದರ ಹೆಸರಿನಲ್ಲಿ ಧಾಂಬಿಕತೆ ನಡೆಯುವುದಾದರೂ ಹೇಗೆ? ಒಬ್ಬಿಬ್ಬ ಮುಖಂಡರನ್ನು ಹೂಹಾರ ಹಾಕಿ ಹೊಗಳುವುದು, ಆ ಮೂಲಕ ಜನರ ಸೊತ್ತನ್ನು ಲಪಟಾಯಿಸುವುದು. ಬಳಿಕ ಸಮರ್ಥಿಸುವುದು.

ನಮ್ಮ ಪ್ರಾಂತ್ಯದಲ್ಲಿರುವ ನದಿಗಳಿಂದ ಮಳೆಗಾಲದಲ್ಲಿ ಬರುವ ನೆರೆಯಿಂದಾಗಿ ಸಾವಿರಾರು ಕುಟುಂಬಗಳು ಇಂದು ವರ್ಷ ವರ್ಷ ಸಂಕಷ್ಟಗೊಳಗಾಗುವುದನ್ನು ತಪ್ಪಿಸುವ ಯೋಜನೆಯನ್ನು ತಯಾರಿಸಲು ಸರಕಾರ ಮುಂದಾಗಬೇಕು. ಈ ಮೂಲಕ ನೆರೆ ಸಂಕಷ್ಟಗಳನ್ನು ಪರಿಹರಿಸಲು ಸಾಧ್ಯ. ಸರಕಾರೀ ಮೂಲಗಳಿಂದ ದೊರೆತ ಅಭಿಪ್ರಾಯವನ್ನು ಸರಕಾರ ತೀವ್ರವಾಗಿ ಗಮನಿಸಬೇಕು.

1. ನದಿಗಳ ಆಳವು ತೀರಾ ಕಡಿಮೆಯಾಗಿದೆ. ಈ ಆಳವನ್ನು ಹೆಚ್ಚಿಸಲು ಕ್ರಮಕೈಗೊಳ್ಳಬೇಕು.

2. ನದಿಗಳ ಇಕ್ಕಡೆಗಳಲ್ಲೂ ಎತ್ತರ ಮತ್ತು ಅಗಲವಾದ ದಂಡೆಗಳನ್ನು ಕಟ್ಟಬೇಕು.

3. ನದಿಗಳಿಗೆ ಬರುವ ಗುಡ್ಡೆಗಳ ನೀರನ್ನು ಒಂದೇಸಮನೆ ಬಾರದಂತೆ ತಡೆಯಲು ಅಣೆಕಟ್ಟುಗಳನ್ನು ನಿರ್ಮಿಸಿ, ನೀರಿನ ರಭಸಕ್ಕೆ ತಡೆಯೊಡ್ಡಬೇಕು.

4. ತಡೆಯೊಡ್ಡಿದ ನೀರಿನಿಂದ ಬೇಸಿಗೆ ಕಾಲದ ಕೃಷಿ ಬೆಳೆ ಮಾಡಲು ಸಹಾಯವಾಗುವಂತೆ ಮಾಡಬೇಕು.

ನೆರೆಯಿಂದಾಗಿ ಸಂಕಷ್ಟಪಡುವವರ ಬಗ್ಗೆ ಹಾಗೂ ರಾಜ್ಯದ ಹಿತದೃಷ್ಟಿಯಿಂದ ಈ ಕೆಲಸಗಳನ್ನು ನಡೆಸಲು ಕೇಂದ್ರ ಸರಕಾರದ ಸಹಾಯ ಪಡೆಯಲು ಪ್ರಯತ್ನಿಸಬೇಕು. ಹೀಗೆ ರಾಜ್ಯದ ಹಾಗೂ ಜನರ ಸಮಸ್ಯೆಗಳನ್ನು ಪರಿಹರಿಸಲು ಅಧಿಕಾರದಲ್ಲಿರುವ ಸರಕಾರ ಪ್ರಯತ್ನಿಸುವುದು ಅಗತ್ಯವಿದೆ. ಬದಲಿಗೆ ಭಾಷಣ, ಪತ್ರಿಕೆಗಳ ಪ್ರಚಾರಗಳಿಂದ ಸಮಸ್ಯೆಗಳು ನಿವಾರಣೆಯಾಗದು.

●

## ನೆರೆ ಪೀಡಿತ ಸಂತ್ರಸ್ತರಿಗೆ ಡಿ.ವೈ.ಎಫ್.ಐ. ಕಾರ್ಯಕರ್ತರ ನೆರವು

ಕುಂದಾಪುರದ ಗ್ರಾಮಾಂತರ ಪ್ರದೇಶಗಳಲ್ಲಿ ಉಂಟಾದ ನೆರೆ ಹಾವಳಿಯ ಸಮಯದಲ್ಲಿ ಆಯಾ ಗ್ರಾಮಗಳಲ್ಲಿರುವ ಡಿ.ವೈ.ಎಫ್.ಐ. ಸದಸ್ಯರು ಪ್ರವಾಹಕ್ಕೆ ಸಿಲುಕಿದವರನ್ನು ಹಾಗೂ ಸ್ವತ್ತನ್ನು ರಕ್ಷಿಸುವ ಕಾರ್ಯದಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದಾರೆ. ನೆರೆ ಪೀಡಿತರಿಗೆ ಪರಿಹಾರಕ್ಕಾಗಿ ಅವಶ್ಯವಿರುವ ಅರ್ಜಿಗಳನ್ನು ಬರೆದು ಸಂಬಂಧಪಟ್ಟವರಿಗೆ ತಲುಪಿಸುವ ಕಾರ್ಯವನ್ನು ಮಾಡಿದ್ದಾರೆ. ನೆರೆ ಪೀಡಿತ ಪ್ರದೇಶಗಳಲ್ಲಿ ಸರಕಾರವು ಏರ್ಪಡಿಸಿದ ಗಂಜೀ ಕೇಂದ್ರಗಳಲ್ಲಿ ಡಿ.ವೈ.ಎಫ್.ಐ. ಸದಸ್ಯರು ಕೆಲಸ ಮಾಡುತ್ತಿದ್ದಾರೆ.

ತಾಲ್ಲೂಕಿನಲ್ಲಿ ಸಂಭವಿಸಿದ ಭೀಕರ ನೆರೆ ದುರಂತದಿಂದ ನಿರಾಶ್ರಿತರಾದವರಲ್ಲಿ ಶೇ. 75ಕ್ಕೂ ಹೆಚ್ಚು ಜನರು ಬಡ ಕೃಷಿ ಕೂಲಿಗಾರರು ಹಾಗೂ ಮೀನುಗಾರರಾಗಿದ್ದು, ಸರಕಾರವು ಈಗಾಗಲೇ ಪ್ರಕಟಿಸಿದ ಪರಿಹಾರ ಧನವನ್ನು ತಕ್ಷಣವೇ ಒದಗಿಸುವುದು, ಆಶ್ರಯ ಕಳೆದುಕೊಂಡ ಜನತೆಗೆ ವಸತಿ ಸೌಲಭ್ಯ ಕಲ್ಪಿಸಿಕೊಡಬೇಕೆಂದು ಡಿ.ವೈ.ಎಫ್.ಐ. ರಾಜ್ಯ ಸಮಿತಿ ಉಪಾಧ್ಯಕ್ಷ ಕಾಂ| ಮಹಾಬಲ ವಡೇರಹೋಬಳಿ ಒತ್ತಾಯಿಸಿದ್ದಾರೆ.

ಅಲ್ಲದೇ ಸರಕಾರ ನೀಡುವ ಎಲ್ಲಾ ಸವಲತ್ತುಗಳ ವಿತರಣ ಕಾರ್ಯವನ್ನು ತ್ವರಿತವಾಗಿ ಮಾಡಬೇಕೆಂದು ನೆರೆ ಪರಿಹಾರ ಸಮಿತಿಯನ್ನು ಒತ್ತಾಯಿಸಿದ್ದಾರೆ.

●

## ಶಾಂತಿಯಾತ್ರೆಯನ್ನು ಯಶಸ್ವಿಗೊಳಿಸಿ

(3ನೇ ಪುಟದಿಂದ)

ಮತ್ತು ಅದಕ್ಕೆ ಸಂಬಂಧಪಟ್ಟ ಸಂಘಟನೆಗಳು ಮಾತ್ರ ಪರ್ಯಾಯವನ್ನೊದಗಿಸಲು ಸಮರ್ಥವಾಗಿವೆ.

ಬೂರ್ಜ್ವಾ ವಿರೋಧ ಪಕ್ಷಗಳಲ್ಲಿ ಎಷ್ಟೇ ಗೊಂದಲವಿದ್ದರೂ, ರಾಜಕೀಯ ಸಮಸ್ಯೆಗಳನ್ನು ಎಲ್ಲಾ ವಿರೋಧ ಪಕ್ಷಗಳು, ಸಾಮೂಹಿಕ ಸಮಸ್ಯೆಗಳನ್ನು ಕಾರ್ಮಿಕ ಸಂಘಟನೆಗಳು ಮತ್ತು ಇತರ ಸಾಮೂಹಿಕ ಸಂಘಟನೆಗಳು ಜೊತೆಗೂಡಿ ಸಂಯುಕ್ತ ಹೋರಾಟವನ್ನು ಬೆಳೆಸುತ್ತಿರುವುದರ ಬಗ್ಗೆ ಪಿ.ಬಿ.ಯು ತೃಪ್ತಿ ವ್ಯಕ್ತಪಡಿಸಿದೆ.

ಪ್ರಮುಖ ಕಾರ್ಮಿಕ ಸಂಘಟನೆಗಳ ಕಾರ್ಮಿಕರ ಸಮಸ್ಯೆಗಳಲ್ಲಿ ಹೆಚ್ಚೆಚ್ಚು ಸಂಯುಕ್ತ ಹೋರಾಟವನ್ನು ಪ್ರಾರಂಭಿಸಿವೆ. ಸಿ. ಪಿ. ಐ (ಎಂ) ಮತ್ತು ಸಿ.ಪಿ.ಐ. ನೇತೃತ್ವದ ರೈತ ಸಂಘಟನೆಗಳು, ಕೆಲವು ನಿರ್ದಿಷ್ಟವಾದ ಸಮಸ್ಯೆಗಳಲ್ಲಿ ಜಂಟೀ ಚಳುವಳಿಯನ್ನು ನಡೆಸುವ ಬಗ್ಗೆ ಮುಂದೆ ಬಂದಿವೆ. ಅದರಂತೆಯೇ ವಿದ್ಯಾರ್ಥಿಗಳ, ಮಹಿಳೆಯರ, ಉಪಾಧ್ಯಾಯರುಗಳ ಇತ್ಯಾದಿ ಸಾಮೂಹಿಕ ಸಂಘಟನೆಗಳೂ ಕೈಗೂಡಿಸುವುದಕ್ಕೆ ನಿರ್ಧರಿಸಿವೆ. ಈ ಜಂಟೀ ಕಾರ್ಯಾಚರಣೆಯು ಹೆಚ್ಚೆಚ್ಚು ಬೆಳೆದು ಬರುವಂತೆ ಪಕ್ಷದ ಎಲ್ಲಾ ಸದಸ್ಯರು ಮುತುವರ್ಜಿಯಿಂದ ಶ್ರಮಿಸಬೇಕೆಂದು ಪಿ. ಬಿ. ಮನವಿ ಮಾಡಿದೆ.

### ಪ. ಬಂಗಾಲ ಬೆಳವಣಿಗೆ ಕುರಿತು :

ಪ. ಬಂಗಾಲದಲ್ಲಿನ ಇತ್ತೀಚಿನ ಬೆಳವಣಿಗೆ ಕುರಿತ ಮುಖ್ಯ ಮಂತ್ರಿಯವರ ವರದಿಯನ್ನು ಗಮನಿಸಿದ ಪಿ.ಬಿ.ಯು ಅದರ ಬಗ್ಗೆ ಸಿ.ಪಿ.ಐ(ಎಂ) ರಾಜ್ಯ ಘಟಕವು ತಳೆದಿರುವ ನಿಲುವನ್ನು ಸಮ್ಮತಿಸಿದೆ. ಎಡರಂಗದ ಸಹವರ್ತಿ ಪಕ್ಷಗಳಾದ ಫಾರ್ವರ್ಡ್ ಬ್ಲಾಕ್ ಮತ್ತು ಆರ್. ಎಸ್. ಪಿ. ಗಳು ಖಾತೆಗಳ ವಿತರಣೆಯ ವಿವಾದವನ್ನು ಸುಗಮವಾಗಿ ನಿವಾರಿಸಲು ಮತ್ತು ಎಡರಂಗದ ಐಕ್ಯತೆಯನ್ನು ಕಾಪಾಡಿಕೊಂಡು ಬರಲು ಮುಖ್ಯ ಮಂತ್ರಿಯವರಿಗೆ ತಮ್ಮ ಸಹಕಾರವನ್ನು ನೀಡುವೆವೆಂದು ಪಿ.ಬಿ. ಆಶಯ ವ್ಯಕ್ತಪಡಿಸಿದೆ.

○

# ಎಸ್. ಎಫ್. ಐ. ಚಟುವಟಿಕೆಗಳು

ಇದೇ ಮೊದಲ ಬಾರಿಗೆ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್. ಐ.) ತನ್ನ ಚಟುವಟಿಕೆಯನ್ನು ಮಂಡ್ಯ ಜಿಲ್ಲೆಗೆ ವಿಸ್ತರಿಸಿದೆ. ಅಸಂಘಟಿತರಾಗಿದ್ದೂ ಹೋರಾಟ ನಡೆಸುತ್ತಿದ್ದ ಇಲ್ಲಿನ ವಿದ್ಯಾರ್ಥಿ ಸಮುದಾಯಕ್ಕೆ ಸಂಘಟಿತ ರೂಪ ನೀಡಲು ಎಸ್. ಎಫ್. ಐ. ಪ್ರಯತ್ನಿಸುತ್ತಿದೆ. ವಿದ್ಯಾರ್ಥಿಗಳ ಪ್ರತಿಕ್ರಿಯೆ ಉತ್ಸಾಹದಾಯಕವಾಗಿದ್ದು ಮೈಸೂರು ನಗರದ ಎಸ್. ಎಫ್. ಐ. ಘಟಕವು ಮಂಡ್ಯ ಜಿಲ್ಲೆಯಲ್ಲಿ ಸಂಘಟನೆಯನ್ನು ವಿಸ್ತರಿಸಿ ಬೆಳೆಸುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದೆ.

## ಮಳವಳ್ಳಿ :

ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿರುವ ಶಾಂತಿ ಕಾಲೇಜಿನಲ್ಲಿ ಎಸ್. ಎಫ್. ಐ. ಸಂಘಟನಾ ಸಮಿತಿ ಸಂಚಾಲಕರಾಗಿ ಆನಂದ್ ಮತ್ತು ಶಿವ ಕುಮಾರ್, ಸಹ ಸಂಚಾಲಕರಾಗಿ ನಾಗೇಂದ್ರ ಮತ್ತು ಕೆಂಪರಾಜ್ ಇವರುಗಳನ್ನು ಆಯ್ಕೆ ಮಾಡಲಾಗಿದೆ. 9-8-82 ರಂದು ಇಲ್ಲಿ ವಿದ್ಯಾರ್ಥಿಗಳ ಸಭೆ ನಡೆಸಲಾಯಿತು.

## ತಳಗವಾಡಿ :

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ತಳಗವಾಡಿ ಗ್ರಾಮದಲ್ಲಿರುವ ಏಕೈಕ ಸರಕಾರಿ ಹೈಸ್ಕೂಲಿನಲ್ಲಿ 8-8-82 ರಂದು ಎಸ್. ಎಫ್. ಐ. ಘಟಕ ಆರಂಭಿಸಲಾಯಿತು. ಶಿಕ್ಷಕರ ತೊರತೆ, ಕಟ್ಟಡದಲ್ಲಿ ಸ್ಥಳಾಭಾವ ಮೊದಲಾದ ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿರುವ ಈ ಹೈಸ್ಕೂಲ್ ವಿದ್ಯಾರ್ಥಿಗಳು ಎಸ್. ಎಫ್. ಐ. ನೇತೃತ್ವದಲ್ಲಿ ಹೋರಾಡಲು ನಿರ್ಧರಿಸಿದ್ದಾರೆ. ಹೈಸ್ಕೂಲ್ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಜವರೇಗೌಡರ ನೇತೃತ್ವದಲ್ಲಿ ಎಸ್.ಎಫ್ ಐ. ಸದಸ್ಯತ್ವ ಕೆಲಸ ಆರಂಭವಾಗಿದೆ. ಹೈಸ್ಕೂಲ್ ಘಟಕ ರಚಿಸಲಾಗಿದ್ದು ಅದರ ಅಧ್ಯಕ್ಷರಾಗಿ ನಿಂಗಶೆಟ್ಟಿ, ಉಪಾಧ್ಯಕ್ಷರಾಗಿ ಟಿ. ಸಿ. ಚೆನ್ನೇಗೌಡ, ಕಾರ್ಯದರ್ಶಿಯಾಗಿ ಜವರೇಗೌಡ, ಸಹ ಕಾರ್ಯದರ್ಶಿಯಾಗಿ ನಿಂಗರಾಜು, ಖಜಾಂಚಿಯಾಗಿ ಸಿ. ಶಿವರಾಮ್ ಮತ್ತು ಸಮಿತಿ ಸದಸ್ಯರಾಗಿ ಸಿ. ಕುಮಾರ್, ಎನ್. ವೀರಭದ್ರಯ್ಯ, ಬಸವರಾಜು ಹಾಗು ಕುಮಾರಿ ಸುನಂದರವರುಗಳನ್ನು ಆಯ್ಕೆ ಮಾಡಲಾಗಿದೆ.

ರಾಜ್ಯ ಎಸ್. ಎಫ್. ಐ. ಅಧ್ಯಕ್ಷರಾದ ಕಾಂ| ಆರ್. ಜಯಕುಮಾರ್ ಮತ್ತು ಮೈಸೂರು ನಗರ ಎಸ್. ಎಫ್.ಐ. ಘಟಕದ ಸದಸ್ಯರಾದ ಕಾಂ| ರಾಮಕೃಷ್ಣರವರುಗಳ ಈ ಎರಡು ಸಭೆಗಳಲ್ಲಿ ಹಾಜರಿದ್ದು ಎಸ್. ಎಫ್. ಐ. ಬಗ್ಗೆ ತಿಳುವಳಿಕೆ ನೀಡಿದರು.

## ಮೈಸೂರು :

ಮೈಸೂರಿನ ಶಾರದಾ ವಿಲಾಸ್ ಕಾಲೇಜಿನಲ್ಲಿ 11-8-82 ರಂದು ನಡೆದ ವಿದ್ಯಾರ್ಥಿಗಳ ಸಭೆಯಲ್ಲಿ ಪಿ.ಯು.ಸಿ. ಮಟ್ಟದ ಎಸ್.ಎಫ್.ಐ. ಸಂಘಟನಾ ಸಮಿತಿಯನ್ನು ರಚಿಸಲಾಯಿತು. ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಕಾಲೇಜಿನ ಸಂಸ್ಕೃತ ಅಧ್ಯಾಪಕರಾದ ಶ್ರೀನಿವಾಸಮೂರ್ತಿ ರಚನಾತ್ಮಕ ಕೆಲಸ ನಿರ್ವಹಿಸುವ ದೃಷ್ಟಿಯಿಂದ ಸಂಘಟಿತರಾಗುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಸಭೆಯ ಕೊನೆಯಲ್ಲಿ ಎಸ್.ಎಫ್. ಐ. ಸಂಘಟನಾ ಸಮಿತಿಯೊಂದನ್ನು ರಚಿಸಲಾಯಿತು. ವಿದ್ಯಾರ್ಥಿ ಸಂಘಟಕರಾಗಿ ರಮಣಾರೆಡ್ಡಿ, ಸಹ ಸಂಚಾಲಕರಾಗಿ ಎಂ. ಸದಾಶಿವ ಕಾಮತ್ ವಿದ್ಯಾರ್ಥಿನಿಯರ ಸಂಘಟಕಿಯಾಗಿ ಮಂಜುಳಾಕುಮಾರಿ, ಸಹ ಸಂಚಾಲಕಿಯಾಗಿ ಯೋಗಲಕ್ಷ್ಮಿ ಮತ್ತು ಖಜಾಂಚಿಯಾಗಿ ಸುಜಾತರವರುಗಳನ್ನು ಆಯ್ಕೆ ಮಾಡಲಾಯಿತು.

ಸಭೆಯನುದ್ದೇಶಿಸಿ ರಾಜ್ಯ ಎಸ್. ಎಫ್. ಐ. ಅಕ್ಷಧ್ಯರಾದ ಕಾಂ| ಆರ್. ಜಯಕುಮಾರ್ ಮತ್ತು ಮೈಸೂರು ಎಸ್. ಎಫ್. ಐ. ಘಟಕದ ಕಾಂ| ರಮಣಾರೆಡ್ಡಿ ಮಾತನಾಡಿದರು.

## ಸವದತ್ತಿ :

ಸ್ಥಳೀಯ ಎಸ್. ಕೆ. ಸಂಯುಕ್ತ ಕಿರಿಯ ಮಹಾ ವಿದ್ಯಾಲಯದ ಎಸ್. ಎಫ್, ಐ. ಶಾಖೆಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡುವುದರ ಮೂಲಕ ಮಾಧ್ಯಮಿಕ ಶಾಲಾ ಶಾಖೆಯು ಕಾಲೇಜ್ ಶಾಖೆಯಿಂದ ಪ್ರತ್ಯೇಕ ಅಸ್ತಿತ್ವವನ್ನು ಪಡೆಯಿತು. ದಿನಾಂಕ 12-8-82 ರಂದು ಜರುಗಿದ ವಿದ್ಯಾರ್ಥಿಗಳ ಸಭೆಯಲ್ಲಿ ಈ ಕೆಳಗಿನವರು ಪ್ರಸ್ತುತ್ತ ವರ್ಷಕ್ಕೆ ಪದಾಧಿಕಾರಿಗಳಾಗಿ ಆಯ್ಕೆಯಾದರು

ಅಧ್ಯಕ್ಷರಾಗಿ ರಾಜು ಜಾಲಿಕೊಪ್ಪ, ಉಪಾಧ್ಯಕ್ಷರಾಗಿ ಬಾಳಪ್ಪ ಚಿಕ್ಕಣ್ಣವರ ಮತ್ತು ಮಹಾಂತೇಶ ಶಿಂತ್ರಿ, ಕಾರ್ಯದರ್ಶಿಯಾಗಿ ಅರವಿಂದ ಬಾಂದೇಕರ, ಸಹಕಾರ್ಯದರ್ಶಿಯಾಗಿ ಶಶಿಕಾಂತ ಉಡಿಕೇರಿ ಮತ್ತು ಕೋಶಾಧ್ಯಕ್ಷರಾಗಿ ಮಹಾಂತೇಶ ಬೇವೂರ ಇವರುಗಳಲ್ಲದೆ 7 ಜನರ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಅಧ್ಯಕ್ಷತೆಯನ್ನು ಕಾಲೇಜ್ ಘಟಕದ ಅಧ್ಯಕ್ಷ ಸುರೇಶ ಒಂಟಿಗೋಡಿ ಇವರು ವಹಿಸಿದ್ದರು. ಕೊನೆಯಲ್ಲಿ ಕಾಲೇಜ್ ಘಟಕದ ಕಾರ್ಯದರ್ಶಿ ಬಿ. ಎಸ್. ಕಳ್ಳೀಮನಿ ವಂದಿಸಿದರು.

## ಪುತ್ತೂರು :

7-8-82 ರಂದು ಪುತ್ತೂರಿನಲ್ಲಿ ಎಸ್.ಎಫ್.ಐ. ತಾಲ್ಲೂಕು ಘಟಕದ ಸಂಘಟನಾ ಸಭೆ ನಡೆಯಿತು. ಅಧ್ಯಕ್ಷತೆಯನ್ನು ಕಾಂ| ಈಶ್ವರನಾಯ್ಕ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ದ. ಕ. ಜಿಲ್ಲಾ ಕಾರ್ಯದರ್ಶಿ ಕಾಂ| ನಿರಂಜನ್‌ರಾವ್ ಮತ್ತು ಕಾಂ| ಬಿ. ರಾಮಕೃಷ್ಣನವರು ಉಪಸ್ಥಿತರಿದ್ದರು.

ಆರಂಭದಲ್ಲಿ ಕಾಂ|ಶ್ಯಾಮ್ ಬೇಕಲ್ ಅವರು ಸ್ವಾಗತಿಸಿ. ಚಟುಪಟಿಕೆಗಳ ವರದಿ ನೀಡಿದರು.

ಕಾಂ| ನಿರಂಜನ್‌ರಾವ್ ಮತ್ತು ರಾಮಕೃಷ್ಣ ಅವರು ಮಾತನಾಡಿ ಸಂಘಟನೆಯನ್ನು ಬಲಪಡಿಸಲು ಕರೆ ನೀಡಿದರು.

ಕೊನೆಯಲ್ಲಿ 5 ಜನರಿರುವ ಸಂಘಟನಾ ಸಮಿತಿಯನ್ನು ರಚಿಸಲಾಯಿತು.

## ಕುಷ್ಟಗಿ :

14-8-82 ರಂದು ರಾಯಚೂರು ಜಿಲ್ಲೆಯ ಕುಷ್ಟಗಿಯ ಕಾಲೇಜಿನಲ್ಲಿ ಎಸ್.ಎಫ್ ಐ ನೇತೃತ್ವದಲ್ಲಿ ವಿದ್ಯಾರ್ಥಿಗಳ ಸಭೆ ನಡೆಯಿತು. ಶ್ರೀರಾಮಮೋಹನ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಮಲ್ಹಾರಿ ದೀಕ್ಷಿತ್ ಆಗಮಿಸಿದ್ದರು.

ಈ ಸಂದರ್ಭದಲ್ಲಿ, ಶ್ರೀ ಅದನಗೌಡ ಮತ್ತು ಶ್ರೀ ಸಿ. ಸಿ. ರೆಡ್ಡಿಯವರು ನೀಡಿದ ಸಹಾಯದಿಂದ 20 ಬಡ ವಿದ್ಯಾರ್ಥಿಗಳಿಗೆ ಬಟ್ಟೆಯನ್ನು ಹಂಚಲಾಯಿತು.

ಮುಖ್ಯ ಅತಿಥಿ ಮಲ್ಹಾರಿ ದೀಕ್ಷಿತ್ ಅವರು ಮಾತನಾಡುತ್ತಾ, ವಿದ್ಯಾರ್ಥಿಗಳು ವೈಜ್ಞಾನಿಕ ದೃಷ್ಟಿಕೋನ ಬೆಳೆಸಿಕೊಳ್ಳುವಂತೆ ಕರೆ ನೀಡಿದರು.

---

# ಸಿ.ಐ.ಟಿ.ಯು. ರಾಜ್ಯ ಮಂಡಳಿಯ ಸದ್ಯಸ್ಯರ ಅವಗಾಹನೆಗೆ

ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಮಂಡಳಿಯ ಸಭೆಯು 1982ರ ಸೆಪ್ಟೆಂಬರ್ 4, 5 ರಂದು ಮೈಸೂರಿನಲ್ಲಿ ನಡೆಯುತ್ತದೆ. 4 ರಂದು ಮಧ್ಯಾಹ್ನ 3 ಗಂಟೆಗೆ ಸಭೆಯು ಪ್ರಾರಂಭವಾಗುತ್ತದೆ. ಸಭೆಯ ನೋಟೀಸುಗಳನ್ನು ಸದಸ್ಯರಿಗೆಲ್ಲಾ ರವಾನಿಸಲಾಗಿದೆ. ಈ ಕಾಲದಲ್ಲಿ ನಾವು ಕಳುಹಿಸುವ ನೋಟೀಸುಗಳು ಸದಸ್ಯರಿಗೆ ತಲುಪದೆ ಇರುವ—ತಡವಾಗಿ ತಲುಪುವ ಸಂಭವವೂ ಇದೆ. ಈ ಪ್ರಕಟಣೆಯನ್ನು ಗಮನಿಸುವ ರಾಜ್ಯ ಮಂಡಳಿ ಸದಸ್ಯರು ಒಂದು ವೇಳೆ ತಮಗೆ ನೋಟೀಸು ತಲುಪದೇ ಇದ್ದರೂ ಸಹ ಇದೇ ನೋಟೀಸೆಂದು ಭಾವಿಸಿ ಸಭೆಗೆ ಬರಬೇಕಾಗಿ ವಿನಂತಿ.

ಸಿ. ನಂಜುಂಡಪ್ಪ
ಪ್ರಧಾನ ಕಾರ್ಯದರ್ಶಿ
ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿ

---

## ಕುಂದಾಪುರ:

# ಅರ್ಥಪೂರ್ಣ ವಿಚಾರ ಸಂಕಿರಣ

ತಾರೀಕು 5-8-1982 ರಂದು ಕುಂದಾಪುರದ ಟಿ. ಡಿ. ಬಿ. ಸಭಾಂಗಣದಲ್ಲಿ ಎಸ್.ಎಫ್.ಐ. ಮತ್ತು ಡಿ.ವೈ. ಎಫ್.ಐ. ನೇತೃತ್ವದಲ್ಲಿ ಯುದ್ಧ ಮತ್ತು ಶಾಂತಿ ವಿಷಯವಾಗಿ ವಿಚಾರ ಸಂಕಿರಣವು ನಡೆಯಿತು. ಪ್ರಪಂಚದಾದ್ಯಂತ ನಡೆಯುತ್ತಿರುವ ಯುದ್ಧ ವಿರೋಧಿ ಕಾರ್ಯಾಚರಣೆಗೆ ತನ್ನದೇ ಆದ ಕಿರುಕಾಣಿಕೆಯನ್ನು ಸಲ್ಲಿಸಲು ಈ ಸಂಕಿರಣವು ಶ್ರಮಿಸಿತು.

ಸಂಕಿರಣದ ಅಧ್ಯಕ್ಷತೆಯನ್ನು ರಾಷ್ಟ್ರ ಪ್ರಶಸ್ತಿ ವಿಜೇತ ಶಿಕ್ಷಕರಾದ (ನಿವೃತ್ತ) ಕೋಟ ರಾಮಚಂದ್ರ ಉಡುಪರು ವಹಿಸಿದ್ದರು. ರಾಜೇಂದ್ರ ಉಡುಪ ಹಾಗೂ ಕೋಟಾ ನಾಗರಾಜ ಇವರು ಪ್ರಬಂಧಗಳನ್ನು ಮಂಡಿಸಿದರು.

ಕೋಟಾ ನಾಗರಾಜ ಇವರು ತಮ್ಮ ಪ್ರಬಂಧವನ್ನು ಮಂಡಿಸುತ್ತಾ "ಮನುಷ್ಯರನ್ನು ಮನುಷ್ಯರು ಪರಸ್ಪರ ಸಾಮೂಹಿಕವಾಗಿ ಕೊಲ್ಲುವುದು ಯುದ್ಧ"ವೆಂದು ಹೇಳಿ, ಇತಿಹಾಸದಲ್ಲಿ ಈ ತನಕ ಸುಮಾರು 14,000 ಯುದ್ಧಗಳು ಜರುಗಿವೆಯೆಂದರು. ಇತ್ತೀಚಿನ ವರ್ಷಗಳಲ್ಲಿ ಸುಧಾರಿತ ಶಸ್ತ್ರಾಸ್ತ್ರಗಳ ಪರಿಣಾಮವಾಗಿ ಯುದ್ಧದಿಂದ ಯುದ್ಧಕ್ಕೆ ಬಂದಂತೆ ಸೈನಿಕರಿಗಿಂತ ಮುಗ್ಧ ನಾಗರಿಕರೇ ಹೆಚ್ಚಿನ ಸಂಖ್ಯೆಯಲ್ಲಿ ನಾಶವಾಗುತ್ತಿರುವ ಸ್ಥಿತಿ ಬಂದೊದಗಿದೆಯೆಂದು ಅವರು ಹೇಳಿದರು. ಜಾಗತಿಕ ಶಾಂತಿಗಾಗಿ ಅವಿರತ ಹೋರಾಡುತ್ತಿರುವ ಸೋವಿಯತ್ ಒಕ್ಕೂಟದ ನಿಶ್ಶಸ್ತ್ರೀಕರಣ ಶರ್ತದ ಕರೆಯನ್ನು ಅಲಕ್ಷಿಸಿರುವುದು ಬಂಡವಾಳಶಾಹಿ, ಸಾಮ್ರಾಜ್ಯಶಾಹಿ ಅಮೇರಿಕದ ನೀತಿಯನ್ನು ಸ್ಪಷ್ಟಗೊಳಿಸುತ್ತದೆಯೆಂದು ತಿಳಿಸಿ, ಸಾಮ್ರಾಜ್ಯಶಾಹಿಗಳ ಯುದ್ಧ ನೀತಿಯನ್ನು ಪ್ರತಿಭಟಿಸಿದರು.

ನಿಸರ್ಗದೊಂದಿಗಿನ ಹೋರಾಟದ ಫಲವಾದ ವಿಜ್ಞಾನದ ಅಗಾಧ ಸಾಧನೆಗಳನ್ನು ತಮ್ಮ ಸ್ವಾರ್ಥ ಸಾಧನೆಗಾಗಿ ದುರುಪಯೋಗಪಡಿಸಿಕೊಳ್ಳುತ್ತಿರುವ ಸಾಮ್ರಾಜ್ಯಶಾಹಿಗಳ "ವ್ಯಭಿಚಾರ ನೀತಿ"ಯನ್ನು ತಮ್ಮ ಪ್ರಬಂಧದಲ್ಲಿ ರಾಜೇಂದ್ರ ಉಡುಪರು ಬಹಿರಂಗಪಡಿಸಿದರು. ಯುದ್ಧ ಮಾರುಕಟ್ಟೆಯಲ್ಲಿ ಹೆಚ್ಚಿನ ಲಾಭವನ್ನು ಪಡೆಯುವುದಕೋಸ್ಕರ ಪ್ರಪಂಚದ ಎಲ್ಲೆಡೆ ಯುದ್ಧಗಳನ್ನು ಪ್ರಚೋದಿಸುವ ಕಾರ್ಯವನ್ನು ಸಾಮ್ರಾಜ್ಯಶಾಹಿ ನಾಯಕ ಅಮೇರಿಕ ನಡೆಸುತ್ತಿದೆಯೆಂದು ಹೇಳಿದರು. ಶೋಷಣಾರಹಿತ ಹಾಗು ಅನ್ಯಾಯವಿರದ ಸಮಾಜ ಸ್ಥಾಪನೆಯಲ್ಲಿ ಯಶಸ್ವಿಯಾದ ಹಾಗು ಅದಕ್ಕಾಗಿ ದಿಟ್ಟ ಹೆಜ್ಜೆ ಇಡುತ್ತಿರುವ ಸಮಾಜವಾದಿ ಬಣದ ನಾಶವೇ ಸಾಮ್ರಾಜ್ಯಶಾಹಿಗಳ ಯುದ್ಧದ ಪ್ರಮುಖ ಗುರಿಯೆಂದು ಹೇಳಿದರು. ಅಲ್ಲದೆ ರಾಷ್ಟ್ರೀಯ ವಿಮೋಚನಾ ಹೋರಾಟಗಳನ್ನು ಸದೆಬಡಿಯುವುದರಲ್ಲಿಯೂ ಇವು ಆಸಕ್ತವಾಗಿದೆಯೆಂದು ಹೇಳಿ, ಶಾಂತಿ ಪ್ರಿಯ, ಮಾನವ ಪ್ರೇಮಿಗಳೆಲ್ಲರೂ ಯುದ್ಧ ನೀತಿಯನ್ನು ಪ್ರತಿಭಟಿಸಿ ಜಾಗತಿಕ ಶಾಂತಿಗಾಗಿ ಹೋರಾಡುವುದು ಕರ್ತವ್ಯವೆಂದರು.

ಅಧ್ಯಕ್ಷತೆಯನ್ನು ವಹಿಸಿದ ಕೋಟಾ ರಾಮಚಂದ್ರ ಉಡುಪರು ಮಾತನಾಡುತ್ತಾ ಮನುಷ್ಯ ಕುಲದ ಅಸ್ತಿತ್ವಕ್ಕೆ ಮಾರಕವಾಗಿರುವ ಅಣುಯುದ್ಧದ ಅಪಾಯದಿಂದ ಪಾರಾಗಬೇಕಾದ ಸಂದಿಗ್ಧ ಪರಿಸ್ಥಿತಿಯಲ್ಲಿ ಜಗತ್ತು ಇಂದು ಇದೆ. ಯುದ್ಧ ವಿರೋಧಿ ಹಾಗು ಶಾಂತಿ ಪರವಾಗಿರುವ ಬೃಹತ್ ಪ್ರದರ್ಶನಗಳು ಜಗತ್ತಿನ ಪ್ರಮುಖ ನಗರಗಳಲ್ಲಿ ನಡೆಯುತ್ತಿದ್ದು; ಇದು ಶಾಂತಿಯ ಅವಶ್ಯಕತೆಯನ್ನಿಂದು ಎತ್ತಿ ತೋರಿಸುತ್ತದೆಯೆಂದು ಹೇಳಿದರು. ಬಂಡವಾಳಶಾಹಿ ರಾಷ್ಟ್ರಗಳೇ ಮಾತ್ರವಲ್ಲದೆ ಸಮಾಜವಾದಿ ರಾಷ್ಟ್ರಗಳೂ (ಮುಖ್ಯವಾಗಿ ರಷ್ಯಾ) ಶಸ್ತ್ರಾಸ್ತ್ರ ತಯಾರಿಕೆಯಲ್ಲಿ ತೊಡಗಿರುವುದು ತಪ್ಪಲ್ಲವೇ ಎನ್ನುವ ಸಭಿಕರ ಪ್ರಶ್ನೆಯೊಂದಕ್ಕೆ ಉತ್ತರವಾಗಿ, ಸಮಾಜವಾದಿ ರಾಷ್ಟ್ರಗಳು ತಮ್ಮ ವೈರಿಗಳಿಂದ ರಕ್ಷಣೆ ಪಡೆಯುವುದಕ್ಕಾಗಿಯೆ ವಿನಃ ಇತರ ರಾಷ್ಟ್ರಗಳ ಮೇಲೆ ಆಕ್ರಮಣ ನಡೆಸಲು ಶಸ್ತ್ರಾಸ್ತ್ರ ತಯಾರಿಸುತ್ತಿಲ್ಲವೆಂದರು. ಹೊಸ ಸಮಾಜವಾದಿ ರಾಷ್ಟ್ರಗಳ ರಕ್ಷಣೆ ಮತ್ತು ಪರಸ್ಪರ ಸಹಕಾರ ಇವುಗಳೇ ಸಮಾಜವಾದಿ ದೇಶಗಳ ಶಸ್ತ್ರಾಸ್ತ್ರ ಪೂರೈಕೆಯ ಉದ್ದೇಶವಾಗಿದ್ದು, ಬಂಡವಾಳಶಾಹಿಗಳಂತೆ ಯುದ್ಧ ಮತ್ತು ಲಾಭ ಖಂಡಿತಾ ಇದರ ಉದ್ದೇಶವಲ್ಲವೆಂದು ಅವರು ಸ್ಪಷ್ಟಪಡಿಸಿ, ಶಸ್ತ್ರಾಸ್ತ್ರ ಮಿತಿಯತ್ತ ರಷ್ಯಾವು ಇಡುತ್ತಿರುವ ದಿಟ್ಟ

(8ನೇ ಪುಟ ನೋಡಿ)

## ಅರ್ಥಪೂರ್ಣ ವಿಚಾರ ಸಂಕಿರಣ

(7ನೇ ಪುಟದಿಂದ)

ಹಾಗು ರಚನಾತ್ಮಕ ಸಲಹೆಗಳನ್ನು ವಿವರಿಸಿದರು. ಎಲ್‌ಸಾಲ್ವಡೋರ್, ದಕ್ಷಿಣ ಆಫ್ರಿಕಾ ಇತ್ಯಾದಿಗಳಲ್ಲಿ ಕೈಗೊಂಬೆ ಸರಕಾರಗಳನ್ನು ಸ್ಥಾಪಿಸಿರುವುದು, ಕೆಲವು ರಾಷ್ಟ್ರಗಳಿಗೆ ಹೇರಳ ಶಸ್ತ್ರ ಸರಬರಾಜಿನ ಮೂಲಕ ಶಸ್ತ್ರ ಪೈಪೋಟಿಗೆ ಅವಕಾಶ ಮಾಡಿ ಕೊಡುವುದು, ನ್ಯಾಯಬದ್ಧ ಬೇಡಿಕೆಗಳಿಗಾಗಿ ಹೋರಾಡುತ್ತಿರುವ ಪಿ. ಎಲ್. ಓ. ಮೇಲೆ ದಾಳಿ ನಡೆಸುತ್ತಿರುವ ಇಸ್ರೇಲ್ ಅನ್ನು ಬೆಂಬಲಿಸುತ್ತಿರುವುದು ಇತ್ಯಾದಿಗಳೆಲ್ಲಾ ಅಮೇರಿಕಾ ಸಾಮ್ರಾಜ್ಯಶಾಹಿಯ ಯುದ್ಧಕೋರ ನೀತಿಯನ್ನು ಬಹಿರಂಗ ಪಡಿಸುವುದಾಗಿದ್ದು, ಇದರ ವಿರುದ್ಧ ಸಾರ್ವಜನಿಕ ಅಭಿಪ್ರಾಯ ರೂಪಿಸುವ ಅವಶ್ಯಕತೆಯನ್ನವರು ಒತ್ತಿ ಹೇಳಿದರು. ವಿಜ್ಞಾನದ ಸಾಧನೆಯೇ ಮಾನವರಿಗೆ ಮಾರಕವಾಗಿ ಪರಿಣಮಿಸಿದೆಯೆಂಬ ವಾದವನ್ನು ತಳ್ಳಿ ಹಾಕಿ, ಸಾಮ್ರಾಜ್ಯಶಾಹಿ ಯುದ್ಧಕೋರರಿಂದ ಮಾತ್ರ ವಿಜ್ಞಾನದ ದುರುಪಯೋಗವಾಗುತ್ತಿದೆಯೆಂದರು. ಎಲ್ಲಾ ಜನರು ಸುಖ ಜೀವನ ನಡೆಸಲು ಸಾಧ್ಯವಾಗುವ ಸಮಾಜ ವ್ಯವಸ್ಥೆಗಾಗಿ ಹೋರಾಡುವುದರೊಂದಿಗೆ ಅಂತರಾಷ್ಟ್ರೀಯ ಶಾಂತಿ ಚಳುವಳಿಗೂ ಶ್ರಮಿಸುವುದು ಪ್ರಗತಿ ಪರರ-ಕ್ರಾಂತಿಕಾರಿಗಳ ಕರ್ತವ್ಯವೆಂದು ಇವರು ಮನಮುಟ್ಟುವಂತೆ ಹೇಳಿದರು.

ಸಭೆಯ ಆರಂಭದಲ್ಲಿ ಡಿ.ವೈ ಎಫ್. ಐ. ತಾಲೂಕು ಸಮಿತಿ ಕಾರ್ಯದರ್ಶಿ ಮಹಾಬಲ ವಡೇರ ಹೋಬ್ಳಿ ಸ್ವಾಗತಿಸಿದರು. ಕೊನೆಯಲ್ಲಿ ಎಸ್. ಎಫ್. ಐ. ಕಾರ್ಯದರ್ಶಿ ರತ್ನಾಕರನ್ ವಂದಿಸಿದರು.

ವರದಿ : ವಿಶ್ವ

●

## ಸಂಪಾದಕೀಯ

(1ನೇ ಪುಟದಿಂದ)

ದೊರೆಯುತ್ತಿಲ್ಲಯೆಂಬ ನೆಪದಲ್ಲಿ ನಾವು ಸಹ ಹಾಗೆಯೇ ಮಾಡಬೇಕೆನ್ನುವುದು ಬುದ್ಧಿವಂತರ ಮಾತಾಗಲಾರದು. ಇತರ ಪ್ರಾಂತಗಳಲ್ಲಿ ಕನ್ನಡಿಗರಿಗೆ ನ್ಯಾಯ ಸಿಗುತ್ತಿಲ್ಲವಾದರೆ ಅದಕ್ಕೆ ಹೋರಾಡೋಣ. ಪ್ರತಿಯಾಗಿ ನಮ್ಮ ರಾಜ್ಯದಲ್ಲಿ ಅಲ್ಪಸಂಖ್ಯಾತರಿಗೆ ಅವರ ಹಕ್ಕನ್ನು ನಿರಾಕರಿಸುವುದು ಸಾಧುವಾದುದಲ್ಲ. ಭಾಷಾವಾರು ಪ್ರಾಂತ ರಚನೆಗೂ ಈ ಧೋರಣೆಗೂ ಯಾವ ಸಂಬಂಧವೂ ಇಲ್ಲ. ಎಲ್ಲ ರಾಜ್ಯಗಳಲ್ಲೂ ಆಯಾ ಪ್ರದೇಶಗಳ ಭಾಷೆಗಳು ರಾಜ್ಯ ಭಾಷೆಗಳಾಗಿ ಆಡಳಿತೆಯ ಭಾಷೆಯಾಗಬೇಕು. ಆಗ ಸಾಮಾನ್ಯ ಜನ ತಮ್ಮ ಬೇಡಿಕೆಗಳನ್ನು ಅಧಿಕಾರಿಗಳ ಗಮನಕ್ಕೆ ತರಲು ಸಾಧ್ಯವಾಗುತ್ತದೆ. ಹಾಗಾದಾಗ ಹೆಚ್ಚು ಜನ ಸರಕಾರಿ ನೌಕರಿಗಳನ್ನಪೇಕ್ಷಿಸುವವರು ಕನ್ನಡವನ್ನು ಕಲಿಯುತ್ತಾರೆ.

ಕನ್ನಡವೇ ಶಿಕ್ಷಣದ ಮಾಧ್ಯಮವಾಗಲೆಂದು ಗೋಕಾಕರು ಆಶಿಸಿದ್ದಾರೆ. ಅವರ ವರದಿಯ ಮೂಲೋದ್ದೇಶವೇನೆಂಬುದು ಈಗ ಬಯಲಾಯಿತು. ಶಿಕ್ಷಣ ಕ್ಷೇತ್ರದಲ್ಲೂ ಕನ್ನಡ ಮಾಧ್ಯಮ ಜಾರಿಗೆ ಬರಬೇಕೆಂಬುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಇದಕ್ಕೆ ಸಂಪೂರ್ಣ ಬೆಂಬಲಕೊಡುತ್ತದೆ. ಆದರೆ ಅಲ್ಪ ಸಂಖ್ಯಾತರಿಗೆ ಅವರ ಮಾತೃ ಭಾಷೆಯಲ್ಲಿ ಶಿಕ್ಷಣ ಪಡೆಯುವ ಹಕ್ಕುಗಳಿಗೆ ಯಾವ ಚ್ಯುತಿಯೂ ಬಾರದಂತೆ ನೋಡಿಕೊಳ್ಳುವುದು ಎಲ್ಲ ಪ್ರಜಾಪ್ರಭುತ್ವವಾದಿಗಳ ಕರ್ತವ್ಯವಾಗಿದೆ. ನಮ್ಮ ರಾಜ್ಯದ ಅಲ್ಪ ಸಂಖ್ಯಾತರಲ್ಲಿ ಈಗಿನ ಸರಕಾರದ ತೀರ್ಮಾನದ ಬಗ್ಗೆ ಸಂಶಯಗಳಿರುವುದು ಖಂಡಿತ. ಇದನ್ನು ಹೋಗಲಾಡಿಸಬೇಕು. ರಾಜ್ಯದ ಐಕ್ಯತೆಗೂ, ಸಮಗ್ರತೆಗೂ, ಅಭಿವೃದ್ಧಿಗೂ ಎಲ್ಲರೂ ಒಂದಾಗಿ ಹೋರಾಡಬೇಕಾದರೆ ಪರಸ್ಪರ ವಿಶ್ವಾಸ ಅಗತ್ಯ. ಕನ್ನಡದ ಮೇಲಿನ ಪ್ರೇಮ ಇತರರ ಬಗ್ಗೆ ದ್ವೇಷವಾಗದಂತೆ ಜಾಗ್ರತೆ ವಹಿಸುವುದು ಕನ್ನಡಿಗರ ಕರ್ತವ್ಯ.

ನಿರಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವುದು, ಕನ್ನಡದ ಮೇಲೆ ಪ್ರೇಮ ಬೆಳೆಯಲು ಪ್ರೋತ್ಸಾಹ ಕೊಡುವುದು. ಹೆಚ್ಚು ಜನ ಕನ್ನಡ ಕಲಿಯಲು ಅವಕಾಶ ಕಲ್ಪಿಸುವುದು ಇದು ನಮ್ಮ ಕರ್ತವ್ಯ. ಕನ್ನಡ ಸಾಹಿತ್ಯಕ್ಕೆ ಕನ್ನಡ ಮಾತೃ ಭಾಷೆಯಲ್ಲದವರ ಕಾಣಿಕೆ ಕಡಿಮೆಯೇನಲ್ಲ. ಕನ್ನಡಕ್ಕೆ ಅಗ್ರಸ್ಥಾನ ಕೊಡಬೇಕೆಂಬ ಉದ್ದೇಶ್ಯದಿಂದ ಅದನ್ನು ತಪ್ಪು ದಾರಿಯಲ್ಲಿ ಕೊಂಡೊಯ್ಯಲು ಹೊರಟರೆ ಅದರಿಂದ ಕನ್ನಡದ ಅಭಿವೃದ್ಧಿಯಾಗಲಾರದು. ಇದರ ಬಗ್ಗೆ ನಾವು ಎಚ್ಚರ ವಹಿಸಬೇಕು. ಇತರರ ಹಕ್ಕುಗಳಿಗೆ ಚ್ಯುತಿಬಾರದಂತೆ ನೋಡಿಕೊಳ್ಳುವುದೂ ನಮ್ಮ ಕರ್ತವ್ಯ.

ಕನ್ನಡ ಭಾಷೆ, ಸಂಸ್ಕೃತಿ ಶತಮಾನಗಳ ಪರಂಪರೆಯನ್ನು ಹೊಂದಿದೆ. ನಮ್ಮ ದೇಶದಲ್ಲೇ ಈಗ ಅದು ಹೆಮ್ಮೆ ಸ್ಥಾನ ಪಡೆದಿದೆ. ಮುಂದೆ ಅದಕ್ಕೆ ಉಜ್ವಲ ಭವಿಷ್ಯವಿದೆ. ಈ ವಿಶ್ವಾಸ ಮತ್ತು ಹೆಮ್ಮೆಯಿಂದ ನಾವು ಪ್ರಜಾರೀತಿಯಲ್ಲಿ ಮುಂದುವರಿಯೋಣ.

## ಖಂಡಿತ ಶರಣಾಗತರಾಗೆವು

(1ನೇ ಪುಟದಿಂದ)

ಪತ್ರಕರ್ತರೊಬ್ಬರ ಪ್ರಶ್ನೆಗೆ ಉತ್ತರಿಸುತ್ತಾ ಪಫೀ ನುಡಿದರು — ಪಿ.ಎಲ್. ಓ.ಗೆ ಮಾನ್ಯತೆ ದೊರೆತಿರುವುದು ಅಪಾರ ತ್ಯಾಗ ಮತ್ತು ಅನವರತ ಹೋರಾಟದಿಂದ. ಸುಮಾರು 100 ದೇಶಗಳು ಪಿ. ಎಲ್. ಓ.ಗೆ ಮಾನ್ಯತೆ ನೀಡಿವೆ. ಸಂಯುಕ್ತರಾಷ್ಟ್ರ ಸಂಸ್ಥೆ (ಯು.ಎನ್.ಓ.) ಯಲ್ಲಿ ವೀಕ್ಷಕಸ್ಥಾನವನ್ನು ಪಡೆದಿದೆ. ಅಮೇರಿಕವೂ ಪಿ.ಎಲ್.ಓ.ಗೆ ಮಾನ್ಯತೆ ನೀಡಬೇಕಾಗುವುದು ಅನಿವಾರ್ಯ ಎಂದ ಪಫಿ, ಇಲ್ಲಿ ಬೇಡಿಕೊಳ್ಳುವ ಪ್ರಶ್ನೆಯೇ ಇಲ್ಲ ಎಂದರು.

ಜಗತ್ತಿನಾದ್ಯಂತ ಪಿ. ಎಲ್. ಓ. ಹೋರಾಟಕ್ಕೆ ದೊರೆತಿರುವ ಸಾರ್ವತ್ರಿಕ ಬೆಂಬಲಕ್ಕೆ ತೃಪ್ತಿ ವ್ಯಕ್ತಪಡಿಸಿದ ಪಫೀ ಅವರು, ಅರಬ್ ರಾಷ್ಟ್ರಗಳ ಮೌನದ ಬಗ್ಗೆ ವಿಷಾದ ವ್ಯಕ್ತಪಡಿಸಿದರು. ಕೆಲವು ಪ್ರತಿಗಾಮಿ ಅರಬ್ ರಾಷ್ಟ್ರಗಳು ಅಮೇರಿಕನ್ ಸಾಮ್ರಾಜ್ಯಶಾಹಿ ಕುತಂತ್ರದಲ್ಲಿ ಭಾಗಿಯಾಗಿವೆ ಎಂದ ಅವರು, 'ಅಫಘಾನಿಸ್ತಾನದ ಆಕ್ರಮಣ ಪ್ರವೇಶ'ದ ಬಗ್ಗೆ ಬೊಬ್ಬೆ ಹೊಡೆಯುವ ಸೌದಿ ಅರೇಬಿಯಾದಂಥ ರಾಷ್ಟ್ರಗಳು, ಇಸ್ರೇಲ್ ಆಕ್ರಮಣದ ಬಗ್ಗೆ ಮೌನ ತಾಳಿರುವುದು ಖಂಡನೀಯ ಎಂದು ನುಡಿದರು.

ಸ್ಥಳ ತೆರವು ಮಾಡಬೇಕೆಂದು ಸಲಹೆ ಮಾಡಿರುವ ಅಮೇರಿಕದ ರಾಯಭಾರಿ ಫಿಲಿಪ್ ಹಬೀಬ್‌ರ ಯೋಜನೆಗೆ ಪಫೀ ಅಸಮ್ಮತಿ ವ್ಯಕ್ತಪಡಿಸುತ್ತಾ, ಈ ಯೋಜನೆಯ ಒಳಾರ್ಥವೆಂದರೆ ಪಿ. ಎಲ್. ಓ. ವನ್ನು ಸಂಪೂರ್ಣ ನಿರ್ಮೂಲನ ಮಾಡಲು ಇಸ್ರೇಲಿನ ಝಿಯೋನಿಸ್ಟರಿಗೆ ಅವಕಾಶಕೊಡುವುದು, ಎಂದು ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸಿದರು.

ಯು.ಎನ್.ಓ.ನ ಎಲ್ಲಾ ನಿರ್ಣಯಗಳನ್ನು ಧಿಕ್ಕರಿಸಿರುವ ಇಸ್ರೇಲ್ ಯಾವುದೇ ಗೌರವಯುತ ಒಪ್ಪಂದಕ್ಕೆ ಸಿದ್ಧವಿಲ್ಲ ಎಂದ ಪಫೀ ನುಡಿದರು.

ಬೇರೂತ್‌ನಲ್ಲಿ ಯುದ್ಧದಲ್ಲಿ ಪಿ. ಎಲ್. ಓ. ಸೋತರೂ, ಕೊನೆಯಲ್ಲಿ ಜಯಗಳಿಸುವುದು ನಿಶ್ಚಿತ ಎಂದ ಪಫೀ, "ಬೇರೂತ್ ಪತನ ನಮ್ಮ ಹೋರಾಟದ ಪ್ರಾರಂಭವೂ ಅಲ್ಲ; ಕೊನೆಯೂ ಅಲ್ಲ" ಎಂದು ಪಿ ಎಲ್.ಓ. ನಾಯಕ ಸ್ಪಷ್ಟಪಡಿಸಿದರು.

○

**ಐಕ್ಯರಂಗ**

**ಪತ್ರಿಕೆಯನ್ನು ಓದಿ**

## —ಹಸಿದ ಕಣ್ಗಳಿಂದ—

### "ಸಂಬಂಧಗಳು"—ಸಂಶಯಗಳು

ರಾಜಕೀಯ, ಜಾತೀಯ ಪ್ರಶ್ನೆ ಯಾವ ಕ್ಷೇತ್ರವನ್ನೂ ಬಿಟ್ಟಿಲ್ಲ. ಈ ಪ್ರಜಾಪ್ರಭುತ್ವ ದೇಶದ ಭದ್ರಬುನಾದಿಯೇ ಜಾತಿ.ಆದುದರಿಂದಲೇ ಎಲ್ಲವನ್ನೂ ಅಳಿಯುವ ವ್ಯವಸ್ಥೆ ಜಾತಿ ಮತ್ತು ಕ್ಷುದ್ರ ರಾಜಕೀಯದ ಮೇಲೆ ಅವಲಂಭನೆಗೊಳ್ಳುತ್ತಿದೆ.

ಆದರೆ ಈಗ ಸಾಹಿತ್ಯ ಕ್ಷೇತ್ರದಲ್ಲೂ ಜಾತಿ, ರಾಜಕೀಯ ನೆರಳು ದಟ್ಟವಾಗುತ್ತಿದೆ. ಈ ಮಾತಿಗೆ ಸ್ಪಷ್ಟ ಉದಾಹರಣೆ ಇತ್ತೀಚಿನ " ಸಂಬಂಧಗಳು " ಪಠ್ಯ ಪುಸ್ತಕದ ಗೊಂದಲ.

ಜಾತಿಯಿಂದ ಹಿಂದುಳಿದ ಲೇಖಕರು ಪ್ರಕಟಿಸಿದ ಈ ಸಂಬಂಧಗಳು ಕೃತಿಗೆ ಅಶ್ಲೀಲತೆಯ ಬಣ್ಣ ಬಳಿದು ವಿಕಾರಗೊಳಿಸಿ ಕೊನೆಗೂ ವಿದ್ಯಾರ್ಥಿಗಳಿಂದ "ಸಂಬಂಧ" ಪುಸ್ತಕದ ಸಂಬಂಧ ಕಡಿದು ಹಾಕಿದರು. ಆದರೆ ಇದರ ಹಿಂದಿನ ರಾಜಕೀಯದ ತೆರೆ ಎಳೆದವರು ಆರ್. ಎಸ್. ಎಸ್. ನವರು ಎಂಬುವುದು ತೀರ ಸ್ಪಷ್ಟ. ಶಿಕ್ಷಣ ವ್ಯವಸ್ಥೆಯ ಹಲವಾರು ಸಮಸ್ಯೆಗಳು ನಮ್ಮ ಮುಂದೆ ಇರುವಾಗ 'ವಿಧ್ಯಾರ್ಥಿ ಪರಿಷತ್' ನಂಥ ಒಂದು ಗುಂಪು ಬರೀ ಪಠ್ಯ ಪುಸ್ತಕ್ತದ ವಿರೋಧ ಪ್ರತಿಭಟಿಸಿದ್ದು ಮತ್ತು ಅದು ಅಶ್ಲಿಲತೆ ಪದಗಳಿಂದ ಕೂಡಿದೆ ಎಂದು ಆರೋಪ ಹೊರಸಿದು ಹಲವರ ಬಗ್ಗೆ ಸಂಶಯ ಪಡಲು ಕಾರಣವಾಗಿದೆ.

ಈ ಹಿಂದೆ ನಮ್ಮ ಮಕ್ಕಳನ್ನು ಹಾಳುಮಾಡುವ ವಿದ್ಯಾಭ್ಯಾಸವನ್ನು ನಮ್ಮ ಸರಕಾರ ನಿರಂತರವಾಗಿ ಕೊಡುತ್ತಾ ಬಂದರು ಯಾರು ಅದರ ಬಗ್ಗೆ ಪ್ರತಿಭಟಿಸಲಿಲ್ಲ. ಹರಿಹರ ರನ್ನರಂತ ಕವಿಗಳು ಅಶ್ಲಿಲತೆ ಕುರಿತು ಪುಟಗಟ್ಟಲೇ ಬರೆದಾಗಲೂ ಯಾರೂ ಓದದೆ ಬಿಡಲಿಲ್ಲ. ಹೀಗಿದ್ದೂ ಬರೀ ಜಾತಿ ಆಧಾರದಿಂದ ಸಂಬಂಧಗಳನ್ನು ತಡೆಯುವ ಪ್ರಯತ್ನ ಅಷ್ಟೇ ಅನರ್ಥವಾದದು.

### ಬೆಂಗಳೂರಿನ ಮನೆಗಳು

"ಬೆಂಗಳೂರು" ಎಂದಾಕ್ಷಣ ಹೊರಗಿನ ಹಲವರಿಗೆ ನೆನಪು ಬರುವುದು ವಿಧಾನಸೌಧ, ಸದಾಶಿವನಗರ, ಜಯನಗರಗಳಂಥ ಶ್ರೀಮಂತ ಬಡಾವಣೆಗಳ ಚಿತ್ರ ಆದರೆ ಹಸಿದ ಕಣ್ಗಳಿಂದ ಒಮ್ಮೆ ಬೆಂಗಳೂರಿನ ಅಂತರಂಗದ ಬದುಕನ್ನು ಬಗೆದು ನೋಡಿದಾಗ ಗೊತ್ತಾಗುವುದು. ಬೆಂಗಳೂರಿನ ಕೊಳೆಯುವ, ಕೊಳೆತ ಬದುಕು. ನಿಲ್ಲಲು ನೆಲೆಯಿಲ್ಲದ ಜೀವನದ ಓಟ. ಇಲ್ಲಿ ಬಡವರು ಬದುಕುವುದು ತೀರ ಕನಸಿನ ಮಾತು. ಆದರೂ ಶ್ರೀಮಂತ ಬೆಂಗಳೂರಿನಲ್ಲಿ ಲೆಕ್ಕವಿಲ್ಲದಷ್ಟು ಬಡವರಿದ್ದಾರೆ. ಆದರೆ ಇವರಾರಿಗೂ ಸ್ವತಃ ನಿಲ್ಲಲು ನೆಲೆಯಿಲ್ಲ. ಬಡತನವನ್ನು ಬೆನ್ನಿಗೆ ಕಟ್ಟಿಕೊಂಡು ಜೀವನಸಾಗಿಸುವ ಮಧ್ಯಮ ವರ್ಗದ ಜನ ಮನೆಗಾಗಿ ಪರದಾಡುವ ಪಾಡು ಯಾರಿಗೂ ಬೇಡ, ಬಂದ ಸಂಬಳದಲ್ಲಿ ಅರ್ಧವನ್ನು ನುಂಗುವ ಬಾಡಿಗೆ ಮನೆಗಳು. ಮನೆ ಮಾಲೀಕರು ಬಡ ಬಾಡಿಗೆದಾರರ ರಕ್ತ ಹೀರುತ್ತಿದ್ದಾರೆ.

ಶ್ರೀಮಂತರ ಭ್ರಷ್ಟ ದುಡ್ಡಿಗೆ ಕೈ ಒಡ್ಡುವ ಬಿ. ಡಿ. ಎ. ಅಧಿಕಾರಿಗಳು ಮತ್ತು ಸರಕಾರ ಅರಮನೆಗಳಂಥ ಮನೆಗಳಲ್ಲಿ ಕುಳಿತು ಬರೀ ಅಲೋಚಿಸುವುದನ್ನು ಬಿಟ್ಟು ನೆಲೆ ಇಲ್ಲದವರಿಗೆ ಮನೆ ಮಾಡಿಕೊಟ್ಟರೆ ಒಂದಿಷ್ಟು ದುಡಿವ ಜೀವಗಳಿಗೆ ನೆಮ್ಮದಿ ದೊರೆತೀತು.

## ಪರಿಸರ

● ಬಿಹಾರದಲ್ಲಿ ಮತೀಯ ಗಲಭೆ ನಡೆದರೆ, ಹರಿಜನರನ್ನು ಮೇಲ್ಜಾತಿಯವರು ಹಾಡುಹಗಲೇ ಕೊಲೆ ಮಾಡಿದರೆ ನಾನು ಏನು ಮಾಡಬಲ್ಲೆ? ಎರಡು ಗುಂಪುಗಳು ಹೊಡೆದಾಡಲಾರಂಭಿಸಿದರೆ ಅದಕ್ಕೆ ಸರ್ಕಾರ ಹೊಣೆಯೇ ? ಸಕಾಲದಲ್ಲಿ ಅದನ್ನು ತಹಬಂದಿಗೆ ತರಲು ವಿಫಲವಾದರೆ ಆಗ ಸರ್ಕಾರವನ್ನು ಆಕ್ಷೇಪಿಸಬಹುದು ಅಷ್ಟೇ.

—ಡಾ|| ಜಗನ್ನಾಥ್ ಮಿಶ್ರಾ (ಸಂಡೇ ಅಬ್ಸರ್ವರ್‌ನಲ್ಲಿ)

○ ಏಶಿಯಾಡ್ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತೊಡಗಿರುವ ಕಾರ್ಮಿಕರ ಹಿತರಕ್ಷಣೆಗೆಂದು ಸುಪ್ರೀಂ ಕೋರ್ಟು ನೇಮಿಸಿದ್ದ ಮೂವರ ವರದಿ, ಈ ಕಾರ್ಯದಲ್ಲಿ ಕಾರ್ಮಿಕರ ಕಾನೂನನ್ನು ದೊಡ್ಡ ಪ್ರಮಾಣದಲ್ಲಿ ಮುರಿಯುವ ಕಾರ್ಯದಲ್ಲಿ ತೊಡಗಿದ್ದಾರೆನ್ನುವ ಆಪಾದನೆಯನ್ನು ಸ್ಥಿರಪಡಿಸಿದೆ.

—ಇ.ಎನ್.ಎಸ್. ಅ. ೧೦

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053. Editorial and managerial office ;L-56, K. V. Temple Street ,Sultanpet, Bangalore-560 053. Phone-24154. Printed at Ravee Traders, No. 8/1, J. M. Lane, Balepet Cross, Bangalore-560 053. EDITOR ; M. K. BHAT.